ಮೈಸೂರ ಗೆಜಿಟ್ಟಿಂ.

ಸಪ್ಲಿವೆಂಟ್.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 20, ಸ॥ 1908.

ಮೈಸೂರು ನ್ಯಾಯವಿಧಾಯಕ ಸಭೆಯ ನಡವಳಿತಗಳ ಸಾರಾಂಶವು.

ಸಭೆಯು ಬೆಂಗಳೂರು ಪಬ್ಲಿಕ್ ಆಫೀಸಸ್ ಯಾ ಆಶಾರಾ ಕಚೇರಿಯಲ್ಲಿರುವ ಸಭಾ ಮಂದಿರದಲ್ಲಿ 1908ನೆ ಇಸವಿ ಆಗಸ್ಟ್ 5ನೇ ತಾರೀಖು ಮೆಧ್ಯಾನ್ಹಾತ್ಪರ 1 ಘಂಟೆಗೆ ಸೇರಿತ್ತು.

ಹಾಜರಿದ್ದವರು.

ವಿ. ಪಿ. ಮಾಧವರಾಯರವರು ಸಿ. ಐ. ಇ., ದಿವಾನರವರು (ಸಭಾಧ್ಯಕ್ಷರು).

ಉದ್ಯೋಗ ಪ್ರಯುಕ್ತ ಮೆಂಬರುಗಳು.

ಟಿ. ಆನಂದರಾಯರವರು ಬಿ. ಎ. (ಮೊದಲನೆಯ ಕಾರ್ಯಸಿಲರು).

ಕೆ. ಪಿ. ಪುಟ್ಟಣ್ಣ ಶೆಟ್ಟಿಯವರು (ಎರಡನೇ ಕಾರ್ಯಸಿಲರು).

ಹೆಚ್ಚಾಗಿ ಸೇರಿರುವ ಮೆಂಬರುಗಳು.

ರಾಜಕಾರ್ಯ ಪ್ರವೀಣ ಎ. ರಂಗಸ್ವಾಮೈಯಂಗಾರ್ಯರು ಬಿ. ಎ., ಬಿ. ಎಲ್.

ಎಚ್. ಜೆ. ಭಾಭಾಯರವರು ಎಂ. ಎ.

ರಾವ್ ಬಹದ್ದೂರ್ ಎಂ. ವೆಂಕಟ್ಟಣ್ಣಸವರು.

ಎಸ್. ನಾರಾಯಣರಾಯರವರು.

ಎಂ. ಕಾಂತರಾಜ ಅರಸಿನವರು ಬಿ. ಎ.

ಕೆ. ಎಸ್. ಚಂದ್ರಶೇಖರ ಅಯ್ಯರವರು ಬಿ. ಎ., ಬಿ. ಎಲ್.

ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳು.

ರಾಜಮಂತ್ರ ಪ್ರವೀಣ ಸಿ. ಶ್ರೀನಿವಾಸೈಯ್ಯಂಗಾರ್ಯರು.

ವಿ. ಎ. ನರಸಿಂಹೈಯ್ಯಂಗಾರ್ಯರು.

ಎಂ. ಸಿ. ರಂಗೈಯ್ಯಂಗಾರ್ಯರು, ಬಿ. ಎ.

ಬಿ. ನಾಗಪ್ಪನವರು (ಬ್ಯಾರಿಸ್ಟರ್ ಅಟ್ ಲಾ.)

ಸೈಯದ್ ಅಮೀರ್ ಹಸ್ನರವರು.

ಸಿ. ಎಸ್. ಬಾಲಸುಂದರಮೈಯ್ಯರವರು, ಬಿ. ಎ. (ಸೆಕ್ರೆಟರಿ).

ಮೆ॥ ಕೆ. ಎಸ್. ಚಂದ್ರಶೇಖರ ಅಯ್ಯನವರು ಈ ಸಭೆಗೆ ಹೆಚ್ಚಾಗಿ ಸೇರಿಸಿಕೊಳ್ಳಲ್ಪಟ್ಟ ಮೆಂಬರಾಗಿ ತಮ್ಮ ಸ್ಥಾನವನ್ನು ವಹಿಸಿರುತ್ತಾರೆಂದು ಸೆಕ್ರಟರಿಯವರು ತಿಳಿಸಿದರು.

1900ನೇ ಇಸವಿಯ III ನೇ ನಂಬರ್ ಮೈಸೂರು ಕೋರ್ಟು ಫೀಜು ರೆಗ್ಯುಲೇಷನನ್ನು ತಿದ್ದುಪಾಟು ಮಾಡುವ 1908ನೇ ಇಸವಿ Iನೇ ರೆಗ್ಯುಲೇಷನಿಗೂ, ಮತ್ತು 1900ನೇ ಇಸವಿ IIನೇ ನಂಬರ್ ಮೈಸೂರು ಸ್ಟ್ಯಾಂಪ್ಪು ರೆಗ್ಯುಲೇಷನನ್ನು ತಿದ್ದುಪಾಟು ಮಾಡುವ 1908ನೇ ಇಸವಿಯ IIನೇ ನಂಬರ್ ರೆಗ್ಯುಲೇಷನಿಗೂ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರು ತಮ್ಮ ಒಪ್ಪಿಗೆಯನ್ನು ವಯಪಾಲಿಸಿರುತ್ತಾರೆಂದು ತಿಳಿಸಿದರು.

ವರ್ತಮಾನ ಪತ್ರಿಕೆಗಳ ಮತ್ತು ಸಾಮಾನ್ಯ ವರ್ತಮಾನಗಳಿರುವ ಅಚ್ಚಾದ ಇತರ ಕಾಗದ ಪತ್ರಗಳ ಪ್ರಕಟನೆಯನ್ನು ಸರಿಯಾಗಿ ಮೇಲ್ವಿಚಾರಣೆ ಮಾಡುವ ಬಗ್ಗೆ ತಕ್ಕ ಏರ್ಪಾಡನ್ನು ಮಾಡುವುದಕ್ಕಾಗಿ 'ಮೈಸೂರು ವರ್ತಮಾನ ಪತ್ರಿಕೆಗಳ ಬಿಲ್' ಎಂಬ ಬಿಲ್ಲನ್ನು ಪ್ರಸ್ತಾಪಿಸಲು ಮೆ॥ ಟಿ. ಆನಂದರಾಯರವರು ಅಪ್ಪಣೆಯನ್ನು ಕೇಳಿದರು. ಆಗ ಅವರು ಬೇಳಿದ್ದೇನೆಂದರೆ—

ಸರ್ಕಾರದವರು ನಡಿಸುವ ಕೆಲಸಗಳ ವಿಷಯದಲ್ಲಿ ಮೈಸೂರು ಶೀಮೆಯಲ್ಲಿರುವ ಕೆಲವು ವರ್ತಮಾನಪತ್ರಿಕೆಗಳು ಈಗ ಕೆಲವು ಕಾಲದಿಂದ ಜನಗಳಿಗೆ ತಪ್ಪು ತಿಳುವಳಿಕೆಯನ್ನು ಕೊಡುತ್ತಲೂ ಸರ್ಕಾರಕ್ಕೆ ಯೋಗ್ಯವಲ್ಲದ ಉದ್ದೇಶಗಳನ್ನು ಆರೋಪಿಸುತ್ತಲೂ ಜಾತಿ ವೈರವನ್ನು ಹೆಚ್ಚಿಸಬಹುದಾದಂಥಾ ಅಭಿಪ್ರಾಯಗಳನ್ನು ಮನಸ್ವಿಯಾಗಿ ಸೂಚಿಸುತ್ತಲೂ ಬ್ರಿಟಿಷ್ ಸರ್ಕಾರದವರು ತಮ್ಮ ಸ್ವಂತಪ್ರಜೆಗಳ ವಿಷಯದಲ್ಲಿಯೂ ದೇಶೀಯ ಸಂಸ್ಥಾನಗಳ ವಿಷಯದಲ್ಲಿಯೂ ನಡಿಸುತ್ತಿರುವ ರಾಜ್ಯಭಾರಕ್ರಮವನ್ನು ಮನಸ್ಸು ಬಂದಂತೆ ಆಕ್ಷೇಪಣೆ ಮಾಡುತ್ತಲೂ ಬಹಳ ಅನರ್ಥವನ್ನುಂಟುಮಾಡುತ್ತಿವೆ. ಇಂಥಾ ಪತ್ರಿಕೆಗಳ ವಿಷಯದಲ್ಲಿ ಕ್ರಮೇಜರುಗಿಸಲು ಈಗ ಜಾರಿಯಲ್ಲಿರುವ ಕಾನೂನುಗಳ ಮೇರೆಗೆ ಸಿದ್ಧವಾಗಿರುವ ಸಾಧನಗಳಿಗಿಂತಲೂ ಇನ್ನೂ ಫಲಕಾರಿಗಳಾದ ಸಾಧನಗಳನ್ನು ಏರ್ಪಡಿಸಬೇಕಾಗಿದೆ. ಈ ವಿಷಯವೂ ಈ ಶೀಮೆಯಲ್ಲಿ ವರ್ತಮಾನಪತ್ರಿಕೆಗಳ ಪ್ರಕಟನೆಯನ್ನು ಇನ್ನೂ ಹೆಚ್ಚಾದ ಪತೋಟಿಯಲ್ಲಿಡುವ ವಿಷಯವೂ ಸಹ ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರ್ರವರ ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ಈ ಸಂಸ್ಥಾನದಲ್ಲಿ ಪ್ರಕಟಿಸಲ್ಪಟ್ಟ ಪತ್ರಿಕೆಗಳು ಇಲ್ಲಿನ ಜನರಿಗೆ ತಪ್ಪು ತಿಳಿವಳಿಕೆಯನ್ನು ಕೊಟ್ಟು ಶ್ರೀಮದಿಂಡಿಯಾ ಸರ್ಕಾರದ ಪ್ರಧಾನಾಧಿಪತ್ಯದ ಮೇಲೆ ಮನಸ್ಸು ಕೆಡುವಂತೆ ಮಾಡಿದ ಪ್ರಯತ್ನಗಳನ್ನು ನೋಡಿ ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಅತ್ಯಂತ ಅಸಮಾಧಾನ ಉಂಟಾಗಿರುತ್ತದೆ.

ಪ್ರಜೆಗಳಿಗೆ ಶ್ರೀಮನ್ಮಹಾರಾಜರಲ್ಲಿರುವ ಭಕ್ತಿಯನ್ನು ಹೋಗಲಾಡಿಸಿ ಅಧಿಕಾರದಲ್ಲಿರುವ ಗೌರವವನ್ನು ನಾಶಮಾಡಿ ಏನೂ ತಿಳಿಯದ ಮೂಢಜನಸಾಮಾನ್ಯರ ಮನಸ್ಸಿನಲ್ಲಿಯೂ ತತ್ಕಾಪಿ ವಿದ್ಯಾರ್ಥಿಗಳ ಮತ್ತು ಬಾಲ್ಯವಯಸ್ಕರ ಮನಸ್ಸಿನಲ್ಲಿಯೂ ಈ ವಿಧವಾದ ಬರವೇಣಿಗೆಗಳು ಉಂಟುಮಾಡಬಹುದಾದ ದುಷ್ಫಲಗಳನ್ನು ಆಲೋಚಿಸಿ ನೋಡಿದರೆ, ಈಗ ಮಾಡಬೇಕೆಂದು ಉದ್ದೇಶಿಸಿರುವಂಥಾ ಏರ್ಪಾಡು ಅತ್ಯವಶ್ಯಕವಾಗಿರುತ್ತದೆ. ಸುಳ್ಳು ವರ್ತಮಾನಗಳಿಗೆ ಗಮನ ಕೊಡದ ಸ್ಥಿತಿಯಲ್ಲಿರುವ ವಿದ್ಯಾವಂತರ ಮಂಡಲಿಗೆ ಮಾತ್ರವೇ ಈ ವರ್ತಮಾನಪತ್ರಿಕೆಗಳು ಹೋಗುತ್ತಿದ್ದರೆ ಬಾಧಕವೇನೂ ಇರುತ್ತಿರಲಿಲ್ಲ. ಹಾಗಿಲ್ಲದೆ ಎಲ್ಲರಿಗೂ ಪ್ರಚಾರವಾಗುತ್ತಾ ಇರುವುದರಿಂದ ಈ ದುಷ್ಫಲಗಳ ಪರಿಮಾಣವನ್ನು ಅಲ್ಪವೆಂದು ಭಾವಿಸುವುದು ಶುದ್ಧ ತಪ್ಪು. ಇದೂ ಅಲ್ಲದೆ ಎಲ್ಲಾ ತರಗತಿಯ ಜನಗಳಲ್ಲಿಯೂ ಪ್ರೈಮರಿ ಯಾ ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಭಿವೃದ್ಧಿ ಪಡಿಸಬೇಕೆಂದು ಸರ್ಕಾರದವರು ಪ್ರಯತ್ನಿಸುತ್ತಿರುವ ಕಾರಣ, ಗ್ರಾಮವಾಸಿಗಳೂ, ನಗರವಾಸಿಗಳೂ, ಎಲ್ಲಾ ವರ್ಗದ ಜನರೂ ಕೂಡ ಈ ಪತ್ರಿಕೆಗಳ ಪ್ರೇರಣೆಯು ಬಳ್ಳಯದೇ ಆಗಿರಲಿ ಕಟ್ಟಿದ್ದೇ ಆಗಿರಲಿ ಅದಕ್ಕೆ ಗುರಿಯಾಗಿರುತ್ತಾರೆ. ಆದಕಾರಣ, ಏನೂ ತಿಳಿಯದೆ ಹೇಳಿದುದನ್ನೆಲ್ಲಾ ವಿಚಾರವಿಲ್ಲದೆ ನಂಬುವ ಮೂಢಜನರನ್ನು ಈ ದುಷ್ಪ್ರೇರಣೆಗಳಿಗೆ ಬಳಗಾಗದಂತೆ ತಮಗೆ ಸಾಧ್ಯವಾದ ಮಟ್ಟಿಗೆ ಕಾಪಾಡುವ ವಿಶೇಷವಾದ ಜವಾಬ್ದಾರಿಯು ಸರ್ಕಾರದವರ ಮೇಲೆ ಬಿದ್ದಿರುತ್ತದೆ.

ಕೆಲವು ಪತ್ರಿಕೆಗಳಲ್ಲಿ ಉಪಯೋಗಿಸಿರುವ ಭಾಷಾಸರಣಿಯನ್ನು ನೋಡಿದರೆ, ಶ್ರೀಮನ್ಮಹಾರಾಜರವರು ತಮ್ಮ ಸರ್ಕಾರದವರು ಮಾಡುವ ಕೆಲಸಕ್ಕೆ ಜವಾಬ್ದಾರರಾಗಿಲ್ಲವೆಂತಲೂ, ಸರ್ಕಾರದೊಡನೆ ವಿಕ್ಷೇಪವಿಸದೆ ಪ್ರತ್ಯೇಕವಾಗಿದ್ದಾರೆಂತಲೂ, ಸಂಸ್ಥಾನದ ಆಡಳಿತದ ವಿಷಯದಲ್ಲಿ ಸ್ವತಃ ಯಾವ ಚಿಂತೆಯನ್ನೂ ಇಟ್ಟುಕೊಂಡಿಲ್ಲವೆಂತಲೂ ಸೂಚಿತವಾಗುತ್ತವೆ. ರಾಜ್ಯಭಾರವು ವಿಚಕ್ಷಣೆಯಿಂದ ನಡೆಯುತ್ತಿರುವುದಕ್ಕೆ ಶ್ರೀಮನ್ಮಹಾರಾಜರವರೇ ಸ್ವತಃ ಮತ್ತು ಸಂಪೂರ್ಣವಾಗಿಯೂ ಜವಾಬ್ದಾರರಾಗಿರುತ್ತಾರೆಂತ ಖಂಡಿತವಾಗಿ ತಿಳಿಸುವುದು ಅವಶ್ಯವಾಗಿದೆ. ಅವರ ರಾಜ್ಯಾಡಳಿತದ ವಿಷಯದಲ್ಲಿ ನ್ಯಾಯವಾಗಿಯೂ, ಯಥಾರ್ಥವಾಗಿಯೂ ಸಿಷ್ಟಪಟವಾಗಿಯೂ ಗುಣದೋಷನಿರೂಪಣೆಗಳನ್ನು ಮಾಡುವುದರಲ್ಲಿ ಯಾವ ಆಕ್ಷೇಪಣೆಯೂ ಇಲ್ಲ. ಆದರೆ ಅಂಥಾ ನಿರೂಪಣೆಗಳ ವಿಷಯವಾಗಿರುವಂಥಾ ಅಥವಾ ಅವರ ರಾಜ್ಯಭಾರದ ಆಡಳಿತವನ್ನು ತುಚ್ಛವಾಗುವಹಾಗೆ ಮಾಡುವಂಥಾ ಅಥವಾ ಅವರ ಮಂತ್ರಿ

ಗಳ ಮತ್ತು ಅಧಿಕಾರಿಗಳ ಉದ್ದೇಶಗಳ ಮತ್ತು ಕಾರ್ಯಗಳ ವಿಷಯದಲ್ಲಿ ತಪ್ಪು ತಿಳಿವಳಿಕೆಗಳನ್ನು ಕೊಡುವಂಥಾ ಚರ್ಚೆಗಳನ್ನು ಪತ್ರಿಕೆಗಳಲ್ಲಿ ನಡಿಸಕೂಡದೆಂತ ಇನ್ನೊಂದಾವರ್ತಿ ಸ್ಪಷ್ಟಪಡಿಸುವುದು ಅವಶ್ಯವಾಗಿದೆ.

ನಾನು ಈಗ ಜಾರಿಗೆ ತರಬೇಕೆಂದು ಹೇಳುವ ಕಾನೂನು ಹೊಸದಲ್ಲ. ದಿನೇದಿನೇ ಹೆಚ್ಚುತ್ತಿದ್ದ ಕೆಡಕನ್ನು ಕಮ್ಮಿ ಮಾಡುವುದಕ್ಕೋಸ್ಕರ ಸರ್ಕಾರದವರು ಹಿಂದೆ ಪ್ರಯತ್ನ ಪಟ್ಟಿರುತ್ತಾರೆ. ಈ ಪತ್ರಿಕೆಗಳಲ್ಲಿ ಬರುವ ಲೇಖನಗಳು ಎಷ್ಟರಮಟ್ಟಿನ ದುರಾಚಾರಕ್ಕೆ ಕಾರಣವಾಗಿವೆ ಯೆಂಬುವುದು ಕಳದ 6 ತಿಂಗಳ್ಳಲ್ಲಿ ಈ ಮೈಸೂರು ಸೀಮೆಯಲ್ಲಿ ಪ್ರಕಟಿಸಲ್ಪಟ್ಟ ವರ್ತಮಾನ ಪತ್ರಿಕೆಗಳಿಂದ ಆಯಾಯಿಸಿದ ಕೆಲವು ಭಾಗಗಳನ್ನು ಓದಿ ನೋಡಿದರೆ ತಮ್ಮಗೆಲ್ಲಿಗೆ ವ್ಯಕ್ತವಾಗುತ್ತದೆ. ಆಯುಧಗಳನ್ನೂ ಸಿಡಿಮದ್ದುಗಳನ್ನೂ ವಿಷ ಪದಾರ್ಥಗಳನ್ನೂ ಮತ್ತು ಇತರ ಅಪಾಯಕರವಾದ ಸಾಮಾನುಗಳನ್ನೂ ಸ್ವಾಧೀನವಲ್ಲಿಟ್ಟುಕೊಂಡು ಉಪಯೋಗಿಸುವುದನ್ನು ಹತ್ತೋಟಿಯಲ್ಲಿಡುವ ಬಗ್ಗೆ ಸಾಂಕ್ರಾಮಿಕ ಜಾಡ್ಯಗಳು ಹರಡದಂತೆ ಅಡ್ಡಿ ಮಾಡುವುದಕ್ಕೂ ಜನರ ಸೌಖ್ಯಕ್ಕೆ ಅಪಾಯವನ್ನುಂಟು ಮಾಡಬಹುದಾದ ಕೃತ್ಯಗಳನ್ನು ನಿಷೇಧಿಸುವುದಕ್ಕೂ ಕೂಡ ಅವಶ್ಯವಾದ ಅಧಿಕಾರಗಳು ಕಾನೂನಿನಿಂದ ದೊರೆಯುತ್ತಿರುವಾಗ, ಈ ಎಲ್ಲಕ್ಕಿಂತಲೂ ಅಪಾಯಕರವಾಗಿಯೂ ವ್ಯಥೆಯನ್ನುಂಟುಮಾಡುವುದಾಗಿಯೂ ಇರುವ ದುರ್ನಡತೆಗೆ ಕಾರಣವಾದ ವಿಷಯವೆನ್ನು ಇಂಥಾ ಪತ್ರಿಕೆಗಳು ಜನಗಳ ಮನಸ್ಸಿನಲ್ಲಿ ವಾರವಾರವೂ ತುಂಬುತ್ತಿರುವುದನ್ನು ನಿಲ್ಲಿಸುವುದಕ್ಕೆ ಸರ್ಕಾರದವರಿಗೆ ಅಧಿಕಾರವಿಲ್ಲದೇ ಇರುವುದು ಅಸಂಗತವಾಗಿದೆ. ಸಾಮಾನ್ಯ ಜನರು ಇಂಥಾ ಸ್ವಭಾವದ ಪತ್ರಿಕೆಗಳಲ್ಲಿಯ ಬರವಣಿಗೆಗಳು ಎಷ್ಟರಮಟ್ಟಿಗೆ ನಿಜ, ಎಷ್ಟುಮಟ್ಟಿಗೆ ಸುಳ್ಳು ಎಂಬುದನ್ನು ವಿವೇಚನೆ ಮಾಡುವಷ್ಟು ವಿದ್ಯಾವಂತರಾಗಿಲ್ಲ. ಅವರು ಕಾಗದದಲ್ಲಿ ಅಚ್ಚು ಹಾಕಿ ಬಂದುದನ್ನೆಲ್ಲಾ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸುವ ವರ್ತಮಾನದಂತೆಯೇ ನಿಜವಾದುದೆಂತ ತಿಳಿದುಕೊಳ್ಳುತ್ತಾರೆ. ಸಾಧಾರಣವಾಗಿ ಹಳ್ಳಿಗಾಡಿನ ಜನಗಳಿಗೆ ಪ್ರಿಂಟಾದ ಕಾಗದಗಳೆಲ್ಲಾ ಗೆಜೆಟ್ಟಿಂತಲೇ ಭಾವನೆ. ಜನರು "ಗೆಜೆಟ್ಟು" ಎಂದು ಕರೆಯುವ ಕಾಗದಗಳಲ್ಲಿ ಪ್ರಕಟಿಸಿರುವುದನ್ನೇ ಮುಖ್ಯವಾಗಿಟ್ಟುಕೊಂಡು ದೇಶಭಾಷಾ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿರುವ ಪೇಟೆಂಟ್ ಔಷಧಗಳನ್ನು ಬಹಳ ಆತುರದಿಂದ ಹುಡುಕಿ ಕೊಡಲೆ ಕೊಂಡುಕೊಳ್ಳುತ್ತಿರುವುದನ್ನು ತಾವುಗಳು ಕೇಳಿರಬಹುದು. ಕಳದವರುಷದ ಆದಿಯಲ್ಲಿ ಕೋಲಾರ ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳನ್ನು ಬ್ರಿಟಿಷ್ ಸರ್ಕಾರದವರು ತೆಗೆದುಕೊಳ್ಳುವವರಾಗಿದ್ದಾರೆಂದು ಸುಳ್ಳು ವರ್ತಮಾನಗಳನ್ನು ಇಲ್ಲಿನ ಕೆಲವು ಪತ್ರಿಕೆಗಳಲ್ಲಿ ಬರೆದುದನ್ನೆಲ್ಲಾ ಈ ಸಂಸ್ಥಾನದ ದೂರಸ್ಥಳಗಳಲ್ಲಿರುವ ಜನಗಳು ಕೂಡ ನಿಜವೆಂದು ನಂಬಿದುದು ಎಲ್ಲರಿಗೂ ತಿಳಿದೇ ಇದೆ. ಆಶ್ರಿತ ಸಂಸ್ಥಾನಗಳನ್ನಾಳುವ ದೊರೆಗಳಿಗೂ ಬ್ರಿಟಿಷ್ ಸರ್ಕಾರದ ಪ್ರಧಾನಾಧಿಪತ್ಯಕ್ಕೂ ಇರುವ ಸಂಬಂಧವನ್ನು ಪರ್ಯಾಲೋಚಿಸಿ ನೋಡಿದರೆ, ಮುಂದೆ ಏನಾಗುವುದೆಂಬಿ ಪರಿಜ್ಞಾನವೇ ಇಲ್ಲದೆ ಇಂಥಾ ಸುಳ್ಳು ವರ್ತಮಾನಗಳಿಂದ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಪ್ರಧಾನಾಧಿಪತ್ಯದ ಮೇಲೆ ಇರುವ ರಾಜಭಕ್ತಿಯು ಕೆಡುವುದಾದರೆ ಬ್ರಿಟಿಷ್ ಸರ್ಕಾರದವರಿಗೆ ನ್ಯಾಯವಾಗಿಯೂ ಕೋಪಬರಬಹುದು. ಇದನ್ನು ಅಡ್ಡಿಮಾಡಲು ಶ್ರೀಮನ್ಮಹಾರಾಜರವರ ಸರ್ಕಾರದ ಮೇಲೆ ಬಿದ್ದಿರುವ ಜವಾಬ್ದಾರಿಯನ್ನು ಅವರು ಉಪೇಕ್ಷೆ ಮಾಡಲಾಗದು. ಈ ಸಂಸ್ಥಾನದ ರಾಜ್ಯಭಾರವು ಸ್ಥಾಪಿತವಾದಲಾಗಾಯಿತು ಬ್ರಿಟಿಷ್ ಸರ್ಕಾರದವರು ವಿಶೇಷ ರಿಯಾಯಿತಿ ತೋರಿಸಿ ತುಂಬಾ ಅಭಿಮಾನದಿಂದ ನಡೆಸಿಕೊಂಡು ಬಂದಿರುವುದರಿಂದ ಈ ಮೈಸೂರು ಸೀಮೆಯಲ್ಲಿ ಬ್ರಿಟಿಷ್ ಅಧಿಕಾರದಮೇಲೆ ಹೀಗೆ ದ್ವೇಷೈಕ ದೃಷ್ಟಿಯುಳ್ಳ ದುರಾಕ್ಷೇಪಣೆಗಳು ಹುಟ್ಟಿರುವುದು ಸುತರಾಂ ತಕ್ಕದ್ದಲ್ಲ; ಮತ್ತು ಕೇವಲ ಅನುಚಿತ. ಮೈಸೂರು ಸರ್ಕಾರದವರು ಮಾಡುವ ಕೆಲಸಗಳನ್ನೂ ಅವರ ಉದ್ದೇಶಗಳನ್ನೂ ಕುರಿತು, ಸರ್ಕಾರದವರ ಪ್ರಯೋಜನಗಳಿಗೆ ಹಾನಿಯಿಲ್ಲದೆ ಪ್ರಕಟಿಸಬಹುದಾದಂಥಾ ವರ್ತಮಾನಗಳನ್ನು ಪತ್ರಿಕಾಕರ್ತರಿಗೂ ಜನಗಳಿಗೂ ಕೊಡಲು ಈ ಸರ್ಕಾರದವರು ಯಾವಾಗಲೂ ಸಿದ್ಧವಾಗಿರುತ್ತಾರಾದ್ದರಿಂದ ಈ ಸಂಸ್ಥಾನದಲ್ಲಿ ಇಂಥಾ ಸುಳ್ಳುಹೇಳಿಕೆಗಳನ್ನು ಹೇಳುವುದೂ ತಪ್ಪು ತಿಳಿವಳಿಕೆಗಳನ್ನು ಕೊಡುವುದೂ ಸಹ ಮತ್ತೂ ತಪ್ಪು; ಈ ಉದ್ದೇಶದಿಂದಲೇ "ಪ್ರೆಸ್‌ರೂಂ" ಎಂದರೆ ಪತ್ರಿಕಾಕರ್ತರಿಗೆ ವರ್ತಮಾನವನ್ನು ಕೊಡುವ ಬಗ್ಗೆ ಒಂದು ಕೊಠಡಿಯನ್ನು ವಿಧಿಸಿ ಅವರಲ್ಲಿ ಪ್ರಕಟನೆಯಬಗ್ಗೆ ಉದ್ದಿಷ್ಟವಾದ ಸರ್ಕಾರಿ ಹುಕುಂಗಳನ್ನು ಇಟ್ಟಿರುತ್ತದೆ. ಇದೂ ಅಲ್ಲದೆ, ಸಾರ್ವಜನಿಕ ಪ್ರಯೋಜನವುಳ್ಳ ಸಂಗತಿಗಳನ್ನು ಕುರಿತು ವರ್ತಮಾನಗಳನ್ನು ಪ್ರಜಾಪ್ರತಿನಿಧಿ ಸಭೆಯ ಮೀಟಿಂಗುಗಳಲ್ಲಿ ಸದರಿ ಸಭೆಯ ಮೆಂಬರುಗಳು ಸರ್ಕಾರದವರಿಂದ ಖುದ್ದು ತಾವೇ ಸಮಕ್ಷವಾದಲ್ಲಿ ತಿಳಿದುಕೊಳ್ಳಬಹುದು; ಈ ಮೀಟಿಂಗುಗಳಿಗೆ ಜನರೆಲ್ಲರೂ ಬರಬಹುದು; ಮತ್ತು ಮೆಂಬರುಗಳು ಪ್ರಸ್ತಾಪಿಸುವ ವಿಷಯಗಳನ್ನು ಎಲ್ಲರ ರೂಬರೂಬು ಚರ್ಚೆಮಾಡಲಾಗುತ್ತದೆ. ಇದೂ ಅಲ್ಲವಾದರೆ, ಸಾರ್ವಜನಿಕವಾದ ವಿಷಯಗಳನ್ನು ಕುರಿತು ನಿಜವಾದ ವರ್ತಮಾನವನ್ನು ಕ್ಷಿಪ್ರವಾಗಿ ಹೊಂದುವಬಗ್ಗೆ ಜನರಿಗೆ ಇನ್ನೂ ಅನುಕೂಲವಾಗುವಂತೆ ಚಾಲ್ತಿಗೆ ತರಲು ಸಾಧ್ಯವಾದ ಉಪಾಯ ಇನ್ಯಾವುದಾದರೂ ಇದ್ದರೆ ಅರೀತಿ ಆಚರಣೆಗೆ ತರಲು ಸರ್ಕಾರದವರು ಹಿಂದೆಗೆಯುವುದಿಲ್ಲ.

ಈ ಪತ್ರಿಕೆಗಳಲ್ಲಿ ನಾವು ಆಗಾಗ್ಗೆ ನೋಡುವ ಇನ್ನೊಂದು ತರಹೆಯ ದೋಷೋದ್ಘಾಟನೆಗಳಿಂದಲೂ ಕೂಡ ಸಂಸ್ಥಾನಕ್ಕೆ ಅಪಾಯ ಉಂಟು. ಈ ಪತ್ರಿಕೆಗಳು ಶ್ರೀಮನ್ಮಹಾರಾಜರವರ ಸರ್ಕಾರವನ್ನು ಯಾವಾಗ್ಗೆ ದೂಷಿಸುವ ಮಾತ್ರದಿಂದ, ಸಂಸ್ಥಾನವೆನ್ನಾಳುವ ಶ್ರೀಮನ್ ಮಹಾರಾಜರವರ ರಾಜಪದವಿಗೆ ಯಾವ ಹಾನಿ

ಯನ್ನೂ ಉಂಟುಮಾಡುವುದಿಲ್ಲವೆಂತ ಆಯಾ ಪತ್ರಿಕಾ ಕರ್ತರು ಯೋಚಿಸುವೆಂತೆ ಕಾಣುತ್ತದೆ. ಸಂಸ್ಥಾನದ ರಾಜ್ಯಭಾರವು ಚೆನ್ನಾಗಿ ನಡೆಯುತ್ತಿರುವುದಕ್ಕೆ ಶ್ರೀಮನ್ಮಹಾರಾಜರವರೇ ಸ್ವತಃ ಜವಾಬ್ದಾರರಾಗಿ ಇರುತ್ತಾರೆ. ಕೌನ್ಸಿಲುಗಳೂ, ಪ್ರತಿನಿಧಿ ಸಭೆಗಳೂ ಮತ್ತು ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ವಿಚಾರಗಳೂ ಇದ್ದಾಗ್ಯೂ ಎಲ್ಲಾ ಅಧಿಕಾರವೂ ಶ್ರೀಮನ್ಮಹಾರಾಜರವರಲ್ಲೇ ಇರುವದರಿಂದ ಈ ಪ್ರಭುತ್ವವು ಸ್ವಭಾವತಃ ನಿರಂಕುಶವಾದ ದ್ದೆಂಬುವ ಅಂಶವನ್ನು ಪತ್ರಿಕಾಕರ್ತರ ಮನಸ್ಸಿಗೆ ಹಿಡಿಯುವೆಂತೆ ಎಷ್ಟುಸಾರಿ ಎಷ್ಟು ದೃಢವಾಗಿ ಹೇಳಿದರೂ ಸಾಲದು. ರೆಂಡಿರ್ಷ ಕಾಲದಲ್ಲಿ, ಎಂದರೆ ಬ್ರಿಟಿಷ್ ಸರ್ಕಾರದವರು ನಮ್ಮ ಶ್ರೀಮನ್ಮಹಾರಾಜರವರಿಗೆ ರಾಜ್ಯವನ್ನು ವಾಪಸು ಮಿಂಸಕೊಟ್ಟ ಕಾಲದಲ್ಲಿಯೂ ಈಗಿನ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ಕಾಲದಲ್ಲಿಯೂ ಸಹ ಮೊತ್ತ ಲ್ಪಟ್ಟ ಆಡಳಿತ ಸಂಬಂಧವಾದ ವಿಚಾರಗಳಿಂದ ಸಂಸ್ಥಾನದ ರಾಜ್ಯಭಾರ ಕ್ರಮದ ನಿಜಸ್ವಭಾವವು ಸ್ವಲ್ಪಮ ಟ್ಟಿಗೆ ಜನಗಳಿಗೆ ತಿಳಿಯದೇ ಇರಬಹುದು. ಇದೂ ಅಲ್ಲದೆ ಪ್ರಾಯಶಃ ಈ ವಿಚಾರಗಳಿಂದಲೂ ಮತ್ತು ರೆಂಡಿ ಷನಿಗೆ ಪೂರ್ವ 50 ವರ್ಷಗಳ ಕಾಲ ಮೈಸೂರು ಸೀಮೆಯು ಬ್ರಿಟಿಷ್ ಸರ್ಕಾರದ ಆಳ್ವಿಕೆಯಲ್ಲಿದ್ದುದರಿಂದಲೂ, ಸಾರ್ವಜನಿಕ ವರ್ತಮಾನ ಪತ್ರಿಕೆಗಳನ್ನು ಕ್ರಮಪಡಿಸುವ ಬಗ್ಗೆ ಬ್ರಿಟಿಷ್ ಇಂಡಿಯಾವಿನಲ್ಲಿ ಜಾರಿಯಲ್ಲಿರುವ ಕಾನೂನಿಗೆ ವ್ಯತಿರಿಕ್ತವಾದ ಕಾನೂನುಗಳನ್ನು ಜಾರಿಗೆ ತರಲು ಮೈಸೂರು ಸರ್ಕಾರದವರಿಗೆ ಇರುವ ಅಧಿಕಾರದ ವಿಷಯವಾಗಿ ಅನುಮಾನ ಹುಟ್ಟುವುದಕ್ಕೆ ಕಾರಣ ವಿರಬಹುದು. ಈ ಸಂಸ್ಥಾನದ ಪ್ರಭುತ್ವದ ಸ್ವಭಾವದ ವಿಚಾ ರವಾಗಿ ನಾನು ಕೊಟ್ಟಿರುವ ವಿವರಣೆಯಿಂದ ಸಾರ್ವಜನಿಕ ವರ್ತಮಾನ ಪತ್ರಿಕೆಗಳನ್ನು ಕ್ರಮಪಡಿಸಲು ಶ್ರೀಮನ್ ಮಹಾರಾಜರವರಿಗೆ ಸಂಪೂರ್ಣಾಧಿಕಾರ ಉಂಟೆಂಬ ಅಂಶವು ನಿಮಗೆ ತಿಳಿಯಬರುತ್ತದೆ. 1894ನೆ ಇಸವಿಯಲ್ಲಿ "ದೇಶಾಭಿಮಾನಿ" ಸಂಬಂಧದಲ್ಲಿ ನಡೆಸಿದ ಅಮಲನ್ನೂ ಹೋದವರ್ಷ "ಸೂರ್ಯೋದಯ" ಸಂಬಂಧದಲ್ಲಿ ಮಾಡಿದ ಪುಕುಮಿನಲ್ಲಿ ಒಪಿರಂಗವಾಗಿ ಕೊಟ್ಟ ಎಚ್ಚರಿಕೆಯನ್ನೂ ಈ ಸಂದರ್ಭದಲ್ಲಿ ಆಲೋಚಿಸಿ ನೋಡಿದರೆ, ಶ್ರೀಮನ್ಮ ಹಾರಾಜರವರ ದೊರತನದ ವಿಶೇಷಾಧಿಕಾರದಲ್ಲಿ ಸ್ವತಃ ಸಿದ್ಧವಾಗಿರುವ ಅಧಿಕಾರಕ್ಕಿಂತಲೂ ವಿಶೇಷವಾದ ಶಿಕ್ಷಾಧಿ ಕಾರವನ್ನು ಸರ್ಕಾರದವರು ಹೊಸದಾಗಿ ನಿರ್ಮಾಣ ಮಾಡುತ್ತಿಲ್ಲವೆಂಬುವುದು ವ್ಯಕ್ತಪಡುತ್ತದೆ. ಶ್ರೀಮನ್ಮಹಾ ರಾಜರವರಿಗೆ ಇಂಥಾ ಅಧಿಕಾರಗಳು ನಿಸ್ಸಂದೇಹವಾಗಿಯೂ ಇದ್ದಮೇಲೆ, ಯಾವದಾದರೂ ವರ್ತಮಾನ ಪತ್ರಿಕೆಯು ತಪ್ಪಿತ ನಡಿಸಿದಲ್ಲಿ ಅಂಥಾ ಪತ್ರಿಕೆಯ ವಿಚಾರವಾಗಿ ಶ್ರೀಮನ್ಮಹಾರಾಜರವರ ಒಂದು ವಿಶೇಷ ಆಜ್ಞೆಯಿಂತೆ ಕ್ರಮ ಜರುಗಿಸಿದರೆ ಸಾಕಾಗಿದೆಯೆಂದು ಹೇಳಬಹುದು. ಇದು ಅತಿ ದುರ್ನಡತೆಯನ್ನು ನಡಿಸಿದ ಪತ್ರಿಕೆಯ ವಿಷಯದಲ್ಲಿ ಮಾತ್ರವೇಕಾವ ಕಡೇಸಹ್ಯದ ಶಿಕ್ಷೆಯನ್ನು ವಿಧಿಸುವ ಉಗ್ರವಾದಿ ಶಿಕ್ಷಾಕ್ರಮವಾಗಿದೆ. ಇದನ್ನು ತಪ್ಪಿಸುವದಕ್ಕೂ ಮತ್ತು ಪತ್ರಿಕಾ ಕರ್ತರ ಪ್ರಯೋಜನಕ್ಕೋಸ್ಕರವೂ ಶ್ರೀಮನ್ಮಹಾರಾಜರವರು ಈಗಿನ ಸಾಮಾನ್ಯ ಕ್ರಮವನ್ನು ಜಾರಿಗೆ ತರುವುದು ಯುಕ್ತವೆಂದು ತೀರ್ಮಾನಿಸಿರುತ್ತಾರೆ. ಈ ಕ್ರಮವು ಪತ್ರಿಕಾ ಕರ್ತರ ನ್ಯಾಯವಾದ ಸ್ವಾ ತಂತ್ರ್ಯಕ್ಕೆ ತೊಂದರೆಯನ್ನುಂಟುಮಾಡುವ ಯಾವ ಸಿರ್ಬಂಧವನ್ನೂ ಹಾಕದೆ ಇರುವುದು ಮಾತ್ರವೇ ಅಲ್ಲದೆ, ಜವಾಬ್ದಾರಿಯುಳ್ಳ ಅವರ ಕೆಲಸಕ್ಕೆ ಸಂಬಂಧಪಟ್ಟ ಕರ್ತವ್ಯವನ್ನೂ, ಸದರಿ ಕರ್ತವ್ಯವನ್ನು ಅತಿಕ್ರಮಿಸಿದರೆ ಉಂಟಾಗುವ ಶಿಕ್ಷೆಯನ್ನೂ ಸಹ ವರ್ತಮಾನ ಪತ್ರಿಕೆಗಳ ಸಂಪಾದಕರಿಗೂ ಪ್ರಕಾಶಕರಿಗೂ ಜ್ಞಾಪಕ ಕೊಡುವು ದಕ್ಕೆ ಸಹಾಯ ಮಾಡುತ್ತದೆ.

ನಾವು ಜಾರಿಗೆ ತರಬೇಕೆಂದು ಹೇಳುವ ಹೊಸ ಕಾನೂನಿನ ನಿಯಮಗಳು ಬಹಳ ಸಾಮಾನ್ಯವಾಗಿವೆ. ಅವು ಗಳ ವಿಷಯವಾಗಿ ಹೆಚ್ಚಾಗಿ ಬೇಳುವದು ಅನವಶ್ಯ. ಸರ್ಕಾರದವರ ಬರಹಮೂಲಕವಾದ ಹುಕುಂ ಶಿವಾಯಿ ಯಾವ ವರ್ತಮಾನ ಪತ್ರಿಕೆಯನ್ನೂ ಪ್ರಕಟಿಸಕೂಡದೆಂತ 2ನೆ ಪ್ರಕರಣದಲ್ಲಿ ವಿಧಿಸಿದೆ. ಈ ವಿಧಿಗೆ ಯಾವನಾದರೂ ತಪ್ಪಿ ನಡೆದರೆ, ಅವನು 7 ದಿವಸಗಳೊಳಗಾಗಿ ಮೈಸೂರು ಸೀಮೆಯನ್ನು ಬಿಟ್ಟು ಹೋಗಬೇಕೆಂದು ಹುಕುಂ ಮಾಡುವುದಕ್ಕೂ ಅವರ ಹುಕುಂ ಶಿವಾಯಿ ಅವನು ಪುನಃ ಸಂಸ್ಥಾನದೊಳಕ್ಕೆ ಬರಕೂಡದೆಂದು ನಿಷೇಧಿಸುವುದಕ್ಕೂ, ಇದೂ ಅಲ್ಲದೆ, ಅವಶ್ಯವಾದರೆ, ಸದರಿಯವನ ಛಾಪಕಾನೆಯನ್ನೂ ಅದರ ತಮಾಂ ಸಾಮಾನುಗಳನ್ನೂ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿದೆಯೆಂದು ಪ್ರಕಟಿಸುವುದಕ್ಕೂ ಕೂಡ 4ನೆ ಪ್ರಕರಣದಿಂದ ಸರ್ಕಾರದವರಿಗೆ ಅಧಿಕಾರವಿದೆ. ತಪ್ಪಿತಸ್ಥನು ಸಂಸ್ಥಾನವನ್ನು ಬಿಟ್ಟು ಹೋಗುವುದಕ್ಕೆ ತಪ್ಪಿದರೂ ಆಜ್ಞೆ ಶಿವಾಯಿ ವಾಪಸು ಬಂದರೂ ಅವನನ್ನು ಬಲಾತ್ಕಾರದಿಂದ ಹೊರಡಿಸುವ ಬಗ್ಗೆ 5ನೆ ಪ್ರಕರಣದಲ್ಲಿ ವಿಧಿಸಿದೆ. ನಿಲ್ಲಿಸಿ ಬಿಡಲ್ಪಟ್ಟ ವರ್ತಮಾನ ಪತ್ರಿಕೆಯು ನ್ಯಾಯಾಧಿಕಾರವನ್ನು ಹಠದಿಂದ ಅಲಕ್ಷ್ಯಮಾಡಿ ಅವಿಧೇಯವಾಗಿ ನಡೆಯುವ ಸಂದರ್ಭದಲ್ಲಿ ಅದಕ್ಕೆ ತಕ್ಕ ನಿಯ ಮವನ್ನು ವಿಧಿಸುವುದಕ್ಕೋಸ್ಕರ, ಈ ಸಂಸ್ಥಾನದಲ್ಲಿ ಪ್ರಕಟಿಸಕೂಡದೆಂದು ರಿಗ್ಯುಲೇಷನಿನ ಮೇರೆಗೆ ನಿಷೇಧಿ ಸಲ್ಪಟ್ಟ ತರುವಾಯ ಮೈಸೂರು ಸೀಮೆಯನ್ನು ಬಿಟ್ಟು ಬ್ರಿಟಿಷ್ ಇಂಡಿಯಾಕ್ಕೆ ಹೋಗಿ ಅಲ್ಲಿಂದ ಸದರಿ ಪತ್ರಿಕೆ ಯನ್ನು ಮೈಸೂರು ಸೀಮೆಯಲ್ಲಿ ಪ್ರಚಾರಮಾಡುತ್ತಾ ಬರುವ ಪತ್ರಿಕೆಯು ಈ ಸಂಸ್ಥಾನಕ್ಕೆ ಬಾರದೇ ಇರುವಬಗ್ಗೆ ಬ್ರಿಟಿಷ್ ಇಂಡಿಯಾವಿನಲ್ಲಿ ನಿಷೇಧಿಸಲ್ಪಟ್ಟ ಯಾವ ಪತ್ರಿಕೆಯನ್ನೇ ಆಗಲಿ—ಮೇಲಾ "ಯು ಗಾಂತರ" ಎಂಬ ಪತ್ರಿಕೆಯನ್ನು ಮೈಸೂರು ಸೀಮೆಗೆ ತರದೆ ಇರುವಬಗ್ಗೆ ಕೂಡ 6 ಮತ್ತು 7ನೆ ಪ್ರಕರಣ,

ಗಳಲ್ಲಿ ನಿಯಮವು ಏರ್ಪಡುತ್ತದೆ. ನಿಷೇಧಿಸಲ್ಪಟ್ಟ ಅಂಥಾ ಯಾವುದಾದರೂ ಪತ್ರಿಕೆಯು ಮೈಸೂರು ಸೀಮೆಯಲ್ಲಿ ಪ್ರಚುರವಾದರೆ, ಅದರ ಪ್ರತಿಗಳು ಎಲ್ಲೆಲ್ಲಿ ಸಿಕ್ಕಿದರೂ ಅವುಗಳನ್ನೆಲ್ಲಾ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿದೆ ಎಂದು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಪ್ರಕಟಿಸಿ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಕ್ರಮ ನಡಿಸಬಹುದೆಂತಲೂ; ಸದರಿ ತಪ್ಪಿತಸ್ಥನು ಸರ್ಕಾರದ ಹುಕುಂ ವಿನಾಯಿ ವರ್ತಮಾನ ಪತ್ರಿಕೆಯನ್ನು ಅಚ್ಚು ಹಾಕಿ ಪ್ರಕಟಿಸಿದ್ದರೆ, ಹೇಗೊ ಹಾಗೆ, ಮೈಸೂರು ಸೀಮೆಯನ್ನು ಬಿಟ್ಟು ಹೋಗಬೇಕೆಂತ ಆವನಿಗೆ ಹುಕುಂ ಮಾಡಿ, ಪುನಃ ಸಂಸ್ಥಾನದೊಳಗೆ ವಾಪಸು ಬರಕೂಡದೆಂತ ನಿಷೇಧಿಸಬಹುದೆಂತಲೂ, 7ನೆ ಪ್ರಕರಣದಲ್ಲಿ ವಿಧಿ ಏರ್ಪಟ್ಟಿರುತ್ತದೆ. 8ನೆ ಪ್ರಕರಣದ ವಿಷಯವಾಗಿ ಸ್ವಲ್ಪ ತಿಳಿಸಬೇಕಾಗಿದೆ. ಇದರಲ್ಲಿ 2ನೆ ಪ್ರಕರಣದ ಮೇರೆಗೆ ಕೊಟ್ಟ ಯಾವ ಹುಕುಮನ್ನೆ ಆಗಲಿ ಸರ್ಕಾರದವರು ಯಾವಾಗ ಬೇಕಾದರೂ ರದ್ದು ಮಾಡಬಹುದೆಂತ ನಿಯಮ ಮಾಡಿ ಇದೆ. ಈ ಬಿಲ್ಲಿನಲ್ಲಿ ಇದು ಪ್ರಾಯಶಃ ಅತ್ಯಂತ ಮುಖ್ಯವಾದ ನಿಯಮವಾಗಿದೆ. ಆದರೆ, ಪ್ರಕೃತ ಕಾನೂನನ್ನು ಏರ್ಪಡಿಸುವುದರಲ್ಲಿ, ಸರ್ಕಾರದವರಿಗೆ ಈಗಿನ ರಾಜನೀತಿಯನ್ನು ಬದಲಾಯಿಸುವ ಉದ್ದೇಶವಿಲ್ಲವೆಂತಲೂ ಆಡಳಿತದ ವಿಷಯವಾಗಿ ಮಾಡುವ ಬರೀ ಚರ್ಚೆಗಳನ್ನು ನಿಷೇಧಿಸುವದು ಅವರ ಅಭಿಪ್ರಾಯ ವಿಲ್ಲವೆಂತಲೂ ನಾನು ದೃಢವಾಗಿ ಹೇಳಬಹುದು. ಈ ಸಂದರ್ಭದಲ್ಲಿ "ಸೂರ್ಯೋದಯ" ಪತ್ರಿಕೆಯ ಮೊಕದ್ದಮೆಯಲ್ಲಿ ಮಾಡಿದ ಹುಕುಮನ್ನು ಉದಹರಿಸಬಹುದು. "ಶ್ರೀಮನ್ಮಹಾರಾಜರವರ ಆಡಳಿತದಲ್ಲಿ ಕಂಡುಬರುವ ಗುಣದೋಷಗಳನ್ನು ವಿವರಿಸಕೂಡದೆಂದು ಶ್ರೀಮನ್ಮಹಾರಾಜರವರ ಸರ್ಕಾರದವರು ಎಷ್ಟುಮಾತ್ರವೂ ಆಕ್ಷೇಪಿಸುವುದಿಲ್ಲವೆಂಬ ಅಂಶವನ್ನು ಎಷ್ಟುಸಲ ಹೇಳಿದರೂ ಅಧಿಕವಾಗಲಾರದು. ಸರಿಯಾದ ತಿಳಿವಳಿಕೆಯೊಡನೆ ಗುಣದೋಷ ನಿರೂಪಣೆ ಮಾಡಿದರೆ ಅದನ್ನು ಸ್ವದರೀ ಸರ್ಕಾರದವರು ಆದರದೊಡನೆ ಅಂಗೀಕರಿಸಲು ಸಿದ್ಧರಾಗಿರುವರು; ತಪ್ಪು ತಿಳಿವಳಿಕೆಯೊಡನೆ ಗುಣದೋಷ ನಿರೂಪಣೆ ಮಾಡಿದರೂ, ಅಥವಾ ಆ ನಿರೂಪಣೆಯಲ್ಲಿ ಮತ್ಸರ ಹೊರತು ಮತ್ತೇನೂ ಕಾಣದಿದ್ದಾಗಲೂ ಕೂಡ ಅದನ್ನು ಸಹಿಸುತ್ತಾರೆ. ಆದರೆ, ಬ್ರಿಟಿಷ್ ಸರ್ಕಾರದವರ ಪ್ರಾಮಾಣಿಕತೆಯನ್ನು ಕುರಿತು ಶ್ರೀಮನ್ಮಹಾರಾಜರವರ ಪ್ರಜೆಗಳಿಗೆ ಸಂದೇಹ ಬರುವಂತೆಯಾಗಲೀ ಶ್ರೀಮನ್ಮಹಾರಾಜಾಸಾಹೇಬ್ ಬಹದ್ದರವರ ಸನ್ನಿಧಾನದ ವಿಷಯದಲ್ಲಿಯೂ ಅವರ ಆಳ್ವಿಕೆಯ ವಿಷಯದಲ್ಲಿಯೂ ಹಾನಿಕರವಾದ ಅಭಿಪ್ರಾಯ ಹುಟ್ಟುವಂತೆಯಾಗಲೀ ಶುದ್ಧಾಂಗವಾಗಿ ಸುಳ್ಳು ವರ್ತಮಾನಗಳನ್ನು ಹರಡುವುದಾದರೆ ಇದನ್ನು ಸಹಿಸಲಾರರು."

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನುಗಳಲ್ಲಿ ಈಗ ಜಾರಿಯಲ್ಲಿರುವ ಬ್ರಿಟಿಷ್ ಕಾನೂನನ್ನೇ ಮೈಸೂರು ಸೀಮೆಗೆ ಜಾರಿಯಲ್ಲಿ ತರುವುದಕ್ಕೆ ಬೇಕಾದ ಬದಲಾವಣೆಗಳೊಡನೆ ಈ ಬಿಲ್ಲನ್ನು ಏರ್ಪಡಿಸಿದ್ದಾಗಿದೆ. ಖಾಪಕಾನೆಯನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವ ಬಗ್ಗೆ ಮಾಡಿರುವ ಬಂದೇ ಬಂದು ವಿಷಯವನ್ನು ಇದಕ್ಕೆ ಹೆಚ್ಚಾಗಿ ಸೇರಿಸಿ ಇದೆ. ಆಶ್ರಿತ ಸಂಸ್ಥಾನದೊಳಗೆ ಇದ್ದು ಪೊಲಿಟಿಕಲ್ ಏಜೆಂಟ್ ಯಾ ರಾಯಭಾರಿಯಿಂದ ಆಳ್ವಟ್ಟಿರುವ ಪ್ರದೇಶದಲ್ಲಿ ಆಶ್ರಯ ಹೊಂದಬಹುದಾದಂಥಾ ಸುಲಿಗೆಖೋರರನ್ನು ಗಡೀಪಾರು ಮಾಡುವಬಗ್ಗೆ ರಾಯಭಾರಿಗೆ ಅಧಿಕಾರ ಕೊಡುವ ಉದ್ದೇಶದಿಂದ ಮಂಜೂರಾದ ಈ ತರಹೆಯ ಕಾನೂನಿನಿಂದ, ಅಂಥಾ ಸುಲಿಗೆಖೋರರನ್ನೂ ಅಪಾಯಕರವಾದ ಸುಳ್ಳು ವರ್ತಮಾನ ಪ್ರಚಾರಮಾಡುವವರನ್ನೂ ತಮ್ಮ ಸೀಮೆಯಿಂದ ಗಡೀಪಾರು ಮಾಡುವುದಕ್ಕೆ ಆಶ್ರಿತ ಸಂಸ್ಥಾನವರಿಗೆ ಅಧಿಕಾರವಿದೆಯೆಂದು ಪೂರ್ವಭಾವಿಯಾಗಿಯೇ ಗೋಚರವಾಗುತ್ತದೆ ಎಂಬುವುದು ಸ್ವತಸ್ಸಿದ್ಧವಾಗಿಯೇ ಇದೆ.

ಈ ವಿಧವಾದ ಕಾನೂನನ್ನು ಮಂಜೂರ್ಮಾಡಿದ ಮಾತ್ರದಿಂದಲೇ, ಸಂಸ್ಥಾನದಲ್ಲಿ ಪ್ರಕಟಿಸಲ್ಪಡುವ ಎಲ್ಲಾ ಪತ್ರಿಕೆಗಳ ವಿಷಯವಾಗಿಯೇ ಆಗಲಿ ಅವುಗಳ ಪೈಕಿ ಯಾವುದಾದರೂ ಒಂದರ ವಿಷಯವಾಗಿಯೇ ಆಗಲಿ ಈ ಕಾನೂನಿನಲ್ಲಿ ವಿಧಿಸಿರುವ ಶಿಕ್ಷೆಗಳನ್ನು ಜಾರಿಯಲ್ಲಿ ತರಲಾಗುವುದೆಂತ ಹೇಳಕೂಡದು. ಬೆಂಗಳೂರು ದಂಡಿನಲ್ಲಿ ಈ ಕಾನೂನು 17 ವರ್ಷಗಳಿಂದ ಜಾರಿಯಲ್ಲಿದ್ದಾಗ್ಯೂ ಇಷ್ಟು ಕಾಲದಲ್ಲಿ ಒಂದು ಸಂದರ್ಭದಲ್ಲಿಯೂ ಕೂಡ ಇದರ ಪ್ರಕಾರ ಶಿಕ್ಷೆಯನ್ನು ವಿಧಿಸಿರುವುದಿಲ್ಲ. ಈ ಸಾದೃಶ್ಯರೀತ್ಯಾ ಆಲೋಚಿಸಿದರೆ, ಈಗ ಸಲಹೆಯಾಗಿರುವ ಕಾನೂನನ್ನು ಮೈಸೂರು ಸೀಮೆಯಲ್ಲಿಯೂ ಅನುಸರಿಸಿ ಕ್ರಮ ಜರುಗಿಸಬೇಕಾದ ಸಂಭವವು ಬೀಳಲಾರದೆಂತ ನಾನು ನಂಬುತ್ತೇನೆ. ಆದರೆ ಇಂಥಾ ಒಂದು ಕಾನೂನನ್ನು ಏರ್ಪಡಿಸಬೇಕಾದದ್ದು ಅತ್ಯವಶ್ಯವಾಗಿದೆ. ಉದ್ದೇಶಗಳ ಮತ್ತು ಕಾರಣಗಳ ವಿವರಣೆಯಲ್ಲಿ ಸೂಚಿಸಿರುವ ನಾನಾ ತರಹೆಯ ಕೆಡುಕುಗಳಿಗೆ ಬಲವಾದ ಪ್ರತೀಕಾರಗಳನ್ನು ಮಾಡಬೇಕಾದರೆ, ಶ್ರೀಮನ್ಮಹಾರಾಜರವರ ರಾಜ್ಯಭಾರದ ವಿಚಾರವಾಗಿ ಸುಳ್ಳು ವರ್ತಮಾನಗಳನ್ನು ಸದಾಕಾಲದಲ್ಲಿಯೂ ಛಲದಿಂದ ಕೊಡುವುದರ ಮೂಲಕ ಅವರ ಅಧಿಕಾರವು ಬಲಹೀನವಾಗುವುದನ್ನು ತಪ್ಪಿಸಬೇಕಾದರೆ, ಪ್ರಧಾನಾಧಿಪತ್ಯದ ವಿಷಯದಲ್ಲಿ ಸುಳ್ಳು ವರ್ತಮಾನ ಪ್ರಚಾರ ಮಾಡುವುದನ್ನು ನಿಲ್ಲಿಸಬೇಕಾದರೆ, ಜ್ಞಾತಿ ವೈರವನ್ನು ಬಲಪಡಿಸುವ ಪ್ರಯತ್ನಗಳನ್ನು ಖಂಡಿಸಬೇಕಾದರೆ, ಮತ್ತು ಇದೆಲ್ಲಕ್ಕಿಂತಲೂ, ಯಾವ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವುದು ಸರ್ಕಾರದ ಕರ್ತವ್ಯವೊ ಅದೇ ವಿದ್ಯಾಭ್ಯಾಸದ ಪ್ರಸರಣೆಯಿಂದ ಪ್ರಕೃತ ಸ್ಥಿತಿಗಳಲ್ಲಿ ಹೆಚ್ಚು ತಿರುಳೆಂಥಾ, ಮತ್ತು ಪ್ರಾಥಮಿಕ ಪಾಠಶಾಲೆಗಳ ಎಲ್ಲಾ ತರಗತಿಗಳಲ್ಲಿಯೂ ದೇಶಭಾಷೆಯನ್ನು ಮುಖತಾಃ ಹೇಳಿ

ಕೊಡಬೇಕೆಂದು ಸರ್ಕಾರದವರು ಈಚಿಗೆ ಮಾಡಿರುವ ಏರ್ಪಾಟಿನಿಂದ ಎಲ್ಲಾ ತರಗತಿಯ ಮತ್ತು ಎಲ್ಲಾ ಜಾತಿಯ ಜನಗಳಿಗೂ ಸೇರಿ ಸರ್ಕಾರದವರ ಜವಾಬ್ದಾರಿಗೆ ಮತ್ತೊಂದು ಜವಾಬ್ದಾರಿಯನ್ನು ಹೆಚ್ಚಾಗಿ ಸೇರಿಸುತ್ತಿರುವೆಂಥಾ ದುರಾಚಾರಗಳಿಗೆ ಚಿಕ್ಕ ವಯಸ್ಸಿನವರು ಬೀಳದಂತೆ ಕಾಪಾಡಬೇಕಾದರೆ, ಈ ತರಹೆಯ ಕಾನೂನನ್ನು ಅನುಸರಿಸಲು ಹಿಂದೆಗಿಯಕೂಡದು. ಪತ್ರಿಕೆಗಳ ಎಡಿಟರುಗಳೂ ಪ್ರಕಾಶಕರೂ ಜನ ಸಮುದಾಯ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳನ್ನೂ ಜನರ ಕ್ಷೇಮಕ್ಕೆ ವಿಶೇಷ ಮುಖ್ಯವಾದ ಸಂಬಂಧವುಳ್ಳ ಕೆಲಸವನ್ನು ನಡೆಯಿಸಬೇಕಾದ ಹದ್ದುಬಸ್ತುಗಳನ್ನೂ ಕುರಿತು ಪತ್ರಿಕಾ ಕರ್ತರಿಗೆ ಎಚ್ಚರಿಕೆ ಕೊಡುವುದಕ್ಕೆ ಇದು ಬಂದೇ ಮಾರ್ಗವೇ ಹೊರತು ಬೇರೆ ಯಾವುದೂ ಇಲ್ಲ.

ಮಿ॥ ಸೈಯದ್ ಅಮೀರ್‌ಹಸ್ರತ್‌ರವರು ಮೇಲ್ಕಂಡ ಸೂಚನೆಯನ್ನು ಅನುಮೋದಿಸುವೆಲ್ಲಿ ಹೇಳಿದುದೇನೆಂದರೆ—

ಈಗ ಪರ್ಯಾಲೋಚನೆಯಲ್ಲಿರುವಂತಹ ಬಂದು ರೆಗ್ಯುಲೇಷನ್ನನ್ನು ಮೈಸೂರು ಸೀಮೆಯಲ್ಲಿ ಜಾರಿಯಲ್ಲಿ ತರತಕ್ಕದ್ದು ಅತ್ಯವಶ್ಯಕವೆಂದು ನಾನು ನಮ್ರತೆಯೊಡನೆ ಅಭಿಪ್ರಾಯಪಡುತ್ತೇನೆ. ಸರ್ಕಾರದವರ ಕಾರ್ಯಗಳ ವಿಚಾರವಾಗಿ ತಪ್ಪು ತಿಳಿವಳಿಕೆಗಳನ್ನು ಉಂಟು ಮಾಡುವುದರಿಂದಲೂ, ಎಲ್ಲಾ ದರ್ಜೆಗಳ ಸರ್ಕಾರೀ ಅಧಿಕಾರಗಳ ಮೇಲೆಯೂ ಮನಸ್ಸಿ ದುರ್ಭಾವನೆಯನ್ನು ಪ್ರಕಟಿಸುವುದರಿಂದಲೂ ಪದೇ ಪದೇ ಉಂಟಾವ ಕೆಡಕು ಅನೇಕವೇಳೆ ನನಗೆ ತಿಳಿದು ಬಂದಿರುತ್ತದೆ. ಈ ವೈಕಿ ಅನೇಕ ಪತ್ರಿಕೆಗಳು ಅತ್ಯಲ್ಪಬೆಲೆಯವುಗಳಾಗಿಯೂ ಮನೋವಿಕಾರವನ್ನುಂಟುಮಾಡತಕ್ಕವುಗಳಾಗಿಯೂ ಇರುವುದರಿಂದ ಈ ಸಂಸ್ಥಾನದಲ್ಲೆಲ್ಲಾ ಗ್ರಾಮನೌಕರರೂ, ಹೋಬಳಿ ಸ್ಕೂಲ್ ಮಾಸ್ಟರುಗಳೂ ಅವುಗಳಿಗೆ ಯಥೇಚ್ಛವಾಗಿ ಚಂದಾದಾರರಾಗುವುದಲ್ಲದೆ ಅವುಗಳಲ್ಲಿಯ ಲೇಖನಗಳನ್ನು ಗ್ರಾಮಸ್ಥರುಗಳಿಗೆ ತಮ್ಮ ಸ್ವಂತ ವ್ಯಾಖ್ಯಾನಗಳ ಸಮೇತ ಓದಿ ಹೇಳುವುದರಲ್ಲಿ ಆದರವನ್ನು ತೋರಿಸುತ್ತಾರೆ. ಹೀಗೆ ಮಾಡುವುದರಿಂದ ಸರ್ಕಾರಕ್ಕೂ ಸರ್ಕಾರೀ ಆಫೀಸರುಗಳ ಪರವಾಗಿಯೂ ದ್ವೇಷವನ್ನು ಹುಟ್ಟಿಸುವ ಸಂಭವವಿರುವುದಲ್ಲದೆ ಸರ್ಕಾರಕ್ಕೂ ಸರ್ಕಾರೀ ಆಫೀಸರುಗಳಿಗೂ ಸಲ್ಲತಕ್ಕ ಗೌರವ ತಗ್ಗುವದು.

ಇತರ ವಿಧವಾದ ಕೆಡಕು ಹೇಗಾದರೂ ಇರಲಿ. ಜವಾಬ್ದಾರಿ ಎನ್ನುವುದೇ ಇಲ್ಲದೆ ಈ ರೀತಿ ಪತ್ರಿಕೆಗಳನ್ನು ನಡೆಸುವುದರಿಂದ ಕಳದ 25—30 ವರ್ಷಗಳ ಲಾಗಾಯಿತು ಸರ್ಕಾರಿ ಅಧಿಕಾರಿಗಳ ಸ್ಥಾನಾನುಗುಣ್ಯವಾದ ಗೌರವಕ್ಕೆ ಚ್ಯುತಿ ಬಂದಿರುವುದೆಂದು ನನ್ನ ಸ್ವಂತ ಅನುಭವದಿಂದ ನಾನು ಹೇಳಬಲ್ಲೆನು. ಈ ಕಾರಣದಿಂದಲೂ ಇತರ ಕಾರಣಗಳಿಂದಲೂ ಯಾವುದರಿಂದ ಇಂತಹ ಕೆಡಕುಉಂಟಾಗಿರುತ್ತೋ ಅದನ್ನು ನಿವಾರಣೆ ಮಾಡುವುದು ಈಗ ಅತ್ಯಂತ ಅಗತ್ಯವಾಗಿರುವುದೆಂದು ನಾನು ಭಾವಿಸುತ್ತೇನೆ.

ಈ ಕಾರಣಗಳಿಂದ ಈಗ ಸಭೆಯವರ ಮುಂದೆ ಇರಿಸಲ್ಪಟ್ಟ ಮೆಸೂದೆಯನ್ನು ಮನಃಪೂರ್ವಕವಾಗಿ ಅನುಮೋದಿಸುತ್ತೇನೆ.

ಈ ಸೂಚನೆಗೆ ಸಭೆಯವರ ಸಮ್ಮತಿಯನ್ನು ಕೇಳಲಾಗಿ ಸರ್ವರಿಂದಲೂ ಅಂಗೀಕೃತವಾಯಿತು.

ಈ ಬಿಲ್ಲನ್ನು ಕೂಡಲೇ ಪರ್ಯಾಲೋಚನೆಗೆ ತೆಗೆದುಕೊಂಡು ಕಾನೂನಾಗಿ ನಿರ್ಪಡಿಸುವುದಕ್ಕೆ ಆಗುವಂತೆ ನ್ಯಾಯವಿಧಾಯಕ ಸಭೆಯ ಕಾರ್ಯನಿರ್ವಾಹಕ ನಿಬಂಧನೆಗಳನ್ನು ಸ್ವಲ್ಪಕಾಲ ರದ್ದುಪಡಿಸಬೇಕೆಂದು ಮಿ॥ ಟಿ. ಆನಂದರಾಯರವರು ಸೂಚಿಸಿದರು.

ಈ ಸೂಚನೆಯನ್ನು ಮಿ॥ ಕೆ. ಪಿ. ಪುಟ್ಟಣ್ಣಶೆಟ್ಟರವರು ಅನುಮೋದಿಸಿದರು. ಸಭೆಯವರ ಸಮ್ಮತಿಯನ್ನು ಕೇಳಲು ಸರ್ವರಿಂದಲೂ ಅಂಗೀಕೃತವಾಯಿತು.

ಈ ಬಿಲ್ಲನ್ನು ಪರ್ಯಾಲೋಚನೆಗೆ ತೆಗೆದುಕೊಂಡು ಮೆಂಜೂರ್‌ಮಾಡಬೇಕೆಂದು ಮಿ॥ ಆನಂದರಾಯರವರು ಸೂಚಿಸಿದರು.

ಈ ಸೂಚನೆಯನ್ನು ಮಿ॥ ಸೈಯದ್ ಅಮೀರ್‌ಹಸ್ರತ್‌ರವರು ಅನುಮೋದಿಸಿದರು.

ಸಭೆಯವರ ತಿಳಿವಳಿಕೆಯ ಒಗ್ಗೆ ಸೆಕ್ರಟೆರಿಯವರು ಬಿಲ್ಲನ್ನು ಓದಿದರು.

ಮಿ॥ ರಂಗಯ್ಯಂಗಾರ್ಯರವರು—ಬಿಲ್ಲನ್ನು ಜಾರಿಗೆ ತರಬೇಕಾದ ಸಂದರ್ಭಗಳು ಒದಗಿದುದಕ್ಕಾಗಿ ನಾನು ತುಂಬಾ ವ್ಯಾಕುಲಪಡುತ್ತೇನೆ. ನಮ್ಮ ಸುತ್ತುಮುತ್ತಲೂ ಬ್ರಿಟಿಷ್ ಇಂಡಿಯದ ಕೆಲವು ಪ್ರದೇಶಗಳಲ್ಲಿ ದೇಶಾಭ್ಯುದಯಕ್ಕೆ ಅಶುಭಸೂಚಕಗಳಾವ ಸಂಗತಿಗಳು ಸಂಭವಿಸುತ್ತಲಿವೆ. ಬಂದೇ ಸಮನಾಗಿ ಶಾಂತತೆಯಿಂದಲೂ ನಿಷ್ಪಕ್ಷಪಾತತೆಯಿಂದಲೂ ಬಂದು ಶತಮಾನದವರೆಗೆ ಮಾಡಲ್ಪಟ್ಟ ಸರ್ವಜನೋಪಕಾರವಾದ ಕಾರ್ಯವೆಲ್ಲಾ ಅದರಿಂದಲೇ ಇನ್ನು ವಜ್ಜೆಗೆ ಬರಬಹುದೆಂಬ ಸಂಭವವಿದ್ದರೂ ಕೂಡ ಘೋರೋತ್ಪಾತಕವಾದ, ಮೌನುಷ ಸ್ವಭಾವವಿರುದ್ಧವಾದ, ಮತ್ತು ಆರ್ಯವಂಶೀಯರಿಗೆ ಯೋಗ್ಯವೆಲ್ಲದ ಉನ್ಮಾದಕ ಮನೋಭಾವಗಳಿಂದ ನಿರ್ನಾಮವಾಗಿ ಮಾಡಲ್ಪಡುತ್ತಿದೆ.

ಇಂಡಿಯಾದೇಶವು ಮುಖ್ಯವಾಗಿ ಎಂತಹದೇಶವೆಂದರೆ—ಇವರಲ್ಲಿ ರಾಜಭಕ್ತಿ, ಅಧಿಕಾರಗೌರವ, ಕಾನೂನಿಗೆ ವಿನೇಯತ್ವ, ಪ್ರತಿಯೊಂದು ತರಹೆಯ ತಕ್ಕೀರನ್ನು ಘಾತುಕತನವನ್ನೂ ಹೇಯವಾಗಿ ಭಾವಿಸುವಿಕೆ ಈ ಮೊದಲಾ

ತಾವ ಸದ್ಗುಣಗಳು ಸ್ವಭಾವಜನ್ಯವಾಗಿ ಜನಗಳಿಗೆ ಉಂಟಾಗಿರುವವು. ಪ್ರಜೆಗಳಲ್ಲಿ ಬಹುಭಾಗದ ಜನರು ಕಾನೂನಿಗೆ ಅನುಗುಣವಾಗಿ ನಡಿಯುವವರಾಗಿಯೂ ಉನ್ಮತ್ತರಾದ ಜನರದೊಂಬಿಗಳು ಈಚಿಗೆ ನಡೆಸಿದ ಘೋರಕೃತ್ಯಗಳನ್ನೂ ಕಾನೂನಿನ ಭಯವೇ ಇಲ್ಲದೆ ಮಾಡಿದ ತಕ್ಕೀರುಗಳನ್ನೂ ಕೇವಲ ಅಸಹ್ಯಕರವಾಗಿ ಭಾವಿಸುವವರಾಗಿದ್ದಾರೆ. ಇಂಡಿಯಾದೇಶದಲ್ಲಿ ಬಂದು ಪಂಗಡದ ವರ್ತಮಾನಪತ್ರಿಕೆಗಳವರು ತಮ್ಮ ಘನತರವಾದ ಜವಾಬ್ದಾರಿಯನ್ನು ಮರೆತು ಅತ್ಯಂತ ಕೇಡಿಗಾಕರವಾದ ವಿಷಯಗಳನ್ನು ಪ್ರಸರಿಸುವುದಕ್ಕೆ ಉದ್ಯುಕ್ತರಾಗಿರುವುದು ಕೇವಲ ವಿಷಾದಕರ. ಶ್ರೀಮದಿಂಡಿಯಾ ಸರ್ಕಾರದವರ ಪ್ರಥಮಕರ್ತವ್ಯವು ದೇಶದ ಶಾಂತತೆಯನ್ನು ಕಾಪಾಡತಕ್ಕದ್ದಾದುದರಿಂದ ಘಾತುಕತನ, ಬೇಅದಬ್, ಅನಾಯಕತ್ವ ಇವುಗಳು ಹೆಚ್ಚದಂತೆ ನಿರೋಧಿಸಲಿಕ್ಕೂ ಮೂಲೋತ್ಪಾಟನೆ ಮಾಡಲಿಕ್ಕೂ ನಿರ್ಬಂಧಕರವಾಗಿರುವ ಕಾನೂನುಗಳನ್ನು ಜಾರಿಯಲ್ಲಿ ತರಬೇಕಾಗಿ ಬಂದಿತ್ತು.

ವೈಸೂರು ಸಂಸ್ಥಾನದಲ್ಲಿಯಾದರೋ ಪ್ರಜೆಗಳು ತಮ್ಮ ಮಹಾರಾಜರವರಿಗೂ ಸಾರ್ವಭೌಮರ ಸರ್ಕಾರಕ್ಕೂ ತಮ್ಮ ರಾಜಭಕ್ತಿಯನ್ನು ತೋರ್ಪಡಿಸುವುದರಲ್ಲಿ ನಿಶ್ಚಲರಾಗಿರುವುದು ಸಂತೋಷಕರವೇ ಸರಿ. ಕೆಲ ಕಾಲದ ಹಿಂದೆ ಶ್ರೀಮನ್ಮಹಾರಾಜರವರು ತಮಗೂ ತಮ್ಮ ಪ್ರಜೆಗಳಿಗೂ ಬ್ರಿಟಿಷ್ ಸರ್ಕಾರದಲ್ಲಿ ಇರುವ ಮೈತ್ರೀ ಭಾವವೂ ಕೃತಜ್ಞತೆಯೂ ಸಂಪೂರ್ಣವಾಗಿ ಉಂಟೆಂಬುದನ್ನು ಸಾರ್ವಜನಿಕವಾಗಿ ಸ್ವತಃ ಅಪ್ಪಣೆ ಕೊಡಿಸಿದರು. ಶ್ರೀಮನ್ಮಹಾರಾಜರವರ ಪ್ರಜೆಗಳು ಅವರ ಅಪ್ಪಣೆಯನ್ನೇ ಕಾನೂನಿನಂತೆ ಭಾವಿಸಿ ವಿಶೇಷ ಆಹ್ಲಾದದೊಡನೆ ವಿಧೇಯತ್ವವನ್ನು ತೋರ್ಪಡಿಸುತ್ತಾರೆ. ಹೀಗಿದ್ದರೂ ಕೂಡ ಮಿ॥ ಆನಂದರಾಯರವರು ಸೂಚಿಸಿದ ಕೆಲವು ವರ್ತಮಾನ ಪತ್ರಿಕೆಗಳಿಂದ ಆರಿಸಿ ತೆಗೆದ ಭಾಗಗಳನ್ನು ನಾನು ಓದಿ ನೋಡಿದನಂತರ ಈ ಬಿಲ್ಲಿನ ಪರವಾಗಿ ಕೊಟ್ಟಿರುವ ಕಾರಣಗಳು ವಾಸ್ತವವಾದವುಗಳಂದೂ ಸಮಂಜಸವಾದವುಗಳಂದೂ ಒಪ್ಪಿಕೊಳ್ಳಲೇ ಬೇಕಾಗಿ ಬಂದುದಕ್ಕಾಗಿ ನಾನು ವಿಷಾದಿಸುತ್ತೇನೆ. ವರ್ತಮಾನಪತ್ರಿಕೆಗಳವರು ವ್ಯಕ್ತಪಡಿಸುವ ಬುದ್ಧಿ ಕೌಶಲವನ್ನೂ ಅಸಕ್ತಿಯನ್ನೂ ಚತುರತೆಯನ್ನೂ ಯಾವ ಉದ್ದೇಶಗಳಿಗಾಗಿ ಈಗ ವಿನಿಯೋಗಿಸುತ್ತಿರುವರೋ ಅವಕ್ಕಿಂತ ಉತ್ಕೃಷ್ಟ ಮಾರ್ಗಗಳಲ್ಲಿ ವಿನಿಯೋಗಿಸಿದಲ್ಲಿ ಎಷ್ಟೋ ಉಪಕಾರವಾಗಿರುವುದು. ಕಾನೂನನ್ನೂ ನೀತ್ಯನ್ಯಾಯವನ್ನೂ ಮೀರದಂತೆ ವರ್ತಮಾನಪತ್ರಿಕೆಗಳು ಸ್ವಾತಂತ್ರ್ಯವನ್ನು ವಹಿಸಿದಲ್ಲಿ ಅಪಾರವಾದ ಕ್ಷೇಮವು ಲಭಿಸುವುದು. ಆದರೆ ಈ ಮಿತಿಯನ್ನು ಮೀರಿದಲ್ಲಿ ಮರ್ಯಾದೆಯನ್ನು ಅತಿಕ್ರಮಿಸಿದಂತಾಗಿ ವಿಶೇಷ ಅಪಕಾರಕ್ಕೂ ಕೇಡಿಗೂ ಕಾರಣವಾಗುತ್ತೆ. ಆದುದರಿಂದ ಈಗ ಹಾಲೀ ಇರುವ ಮತ್ತು ದಿನೇದಿನೇ ಹೆಚ್ಚುತ್ತಿರುವ ಇಂತಹ ಕೇಡನ್ನು ನಿವಾರಿಸುವುದು ಯುಕ್ತವೇ ಆದರೂ ಈ ಸಂಸ್ಥಾನದ ಅಭ್ಯುದಯಕ್ಕೆ ವಿರೋಧಕರವಾದ ಉದ್ದೇಶದಿಂದಲೇ ಬೇಕೆಂತ ನಡೆಸುವ ವರ್ತಮಾನಪತ್ರಿಕೆಗಳವರನ್ನು ತಮಗೆ ಯುಕ್ತ ತೋರಿದಂತೆ ಶಿಕ್ಷೆಗೆ ಬಳಗು ಮಾಡತಕ್ಕ ಪೂರ್ಣಾಧಿಕಾರವು ಶ್ರೀಮನ್ಮಹಾರಾಜರವರಿಗೇ ಇರುವುದರಿಂದ ಈ ವಿಚಾರವಾಗಿ ಕಾನೂನನ್ನು ಏರ್ಪಡಿಸತಕ್ಕದ್ದು ಅನವಶ್ಯಕವೆಂದು ನಾನು ಬಂದಾನೊಂದು ಕಾಲದಲ್ಲಿ ಅಭಿಪ್ರಾಯ ಪಟ್ಟಿದ್ದೆನು. ಆದರೆ ಈ ಮಸೂದೆಯನ್ನು ಈ ಸಭೆಯವರ ಮುಂದಕ್ಕೆ ತಂದುದರಿಂದ ಹಲವು ವ್ಯಕ್ತವಾದ ಪ್ರಯೋಜನಗಳಿರುವುವೆಂದು ಈಗ ನನ್ನ ಮನಸ್ಸಿಗೆ ತೃಪ್ತಿಯಾಗಿದೆ. ಅವು ಯಾವುವೆಂದರೆ—ಈ ಬಿಲ್ಲು ನ್ಯಾಯವಾದುದಾಗಿಯೂ, ಯುಕ್ತವಾದುದಾಗಿಯೂ ಇರುವುದೆಂಬ ವಿಚಾರವಾಗಿ ಸರ್ಕಾರದವರು ನಂಬಿಕೆಯನ್ನು ಪ್ರದರ್ಶಿಸುವುದೊಂದು; ಅದರ ಷರತ್ತುಗಳನ್ನು ಸಭೆಯವರ ಮುಂದಿರಿಸಿ ಅವರ ಗುಣದೋಷ ನಿರೂಪಣೆಗಳಿಗೆ ಅವಕಾಶ ಕೊಡುವುದಕ್ಕೆ ಸರ್ಕಾರದವರು ಸಮ್ಮತಿಸಿರುವರೆಂಬುದು ಮತ್ತೊಂದು; ಈ ರೀತಿಮಾಡುವುದರಿಂದ ಈ ಮಹಾ ಸಭೆಗೆ ಸರ್ಕಾರದವರು ತುಂಬಾ ಮರ್ಯಾದೆಯನ್ನು ತೋರಿಸುವರೆಂಬುದು ಇನ್ನೊಂದು—ಈ ರೀತಿ ಅನೇಕ ಪ್ರಯೋಜನಗಳಿರುವುವು.

ಈ ಬಿಲ್ಲು ಈ ಸಭೆಯವರಿಂದ ಅನುಮೋದಿತವಾಗಿ ಕಾಲಾನುಕ್ರಮದಲ್ಲಿ ಕಾನೂನಾಗಿ ಏರ್ಪಟ್ಟು ಇದನ್ನು ಹಾಲಿ ಜಾರಿಯಲ್ಲಿರುವ ಪದ್ಧತಿಗಳಿಗನುಗುಣವಾಗಿ ಏರ್ಪಡಿಸಲಾಯಿತಾದುದರಿಂದ ಸರ್ವರೂ ಇದಕ್ಕೆ ಅನುಮೋದಿಸದೆ ಇರಲಾರರು. ಈ ಬಿಲ್ಲಿನ ಮೂಲಾಶಯವನ್ನು ನಾನು ಮನಃಪೂರ್ವಕವಾಗಿ ಅನುಮೋದಿಸುತ್ತೇನೆ.

ಮಿ॥ ನಾಗಪ್ಪನವರು—ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಈ ಮಸೂದೆಯನ್ನು ಜಾರಿಗೆ ತರಬೇಕಾದ ಸಂದರ್ಭವು ಒದಗಿದುದಕ್ಕಾಗಿ ನಾನು ವಿಷಾದಿಸುತ್ತೇನೆ.

ನನ್ನ ಕಾರಣಗಳನ್ನು ತಿಳಿಸದೆಯೇ ಈ ಬಿಲ್ಲಿಗೆ ಮೌನವಾಗಿ ನನ್ನ ಸಮ್ಮತಿಯನ್ನು ಕೊಡುವುದು ಯುಕ್ತವಲ್ಲವೆಂದು ನಾನು ಭಾವಿಸುತ್ತೇನೆ. ಇದುವರೆಗೂ ಬಹುಮಟ್ಟಿಗೆ ಫೀಜಿಲ್ಲದೆ (ಈಗ ಸಂಪೂರ್ಣವಾಗಿ ಫೀಜಿಲ್ಲದೆ) ಪ್ರಾರಂಭಿಕ ವಿದ್ಯಾಭ್ಯಾಸವನ್ನು ಮಾಡಿಸುವಂತೆ ಗ್ರಾಮಾಂತರಗಳಲ್ಲಿ ಹೋಬಳಿ ಸ್ಕೂಲುಗಳನ್ನು ಸರ್ಕಾರದವರು ಸ್ಥಾಪಿಸಿರುವುದರಿಂದ ಎಲ್ಲಾ ಪಂಗಡಗಳವರಲ್ಲಿಯೂ ಪ್ರಾರಂಭಿಕ ವಿದ್ಯಾಭ್ಯಾಸವು ಪ್ರಸರಿಸಿರುವುದು. ಈ ರೀತಿಯ ಪ್ರಚಾರದೊಡನೆಯೇ ವರ್ತಮಾನ ಪತ್ರಿಕೆಗಳನ್ನು ಓದಬೇಕೆಂಬ ಕುತೂಹಲವು ಬೆಳೆಯುತ್ತಾ ಬಂತು. ನಮ್ಮ ಸಂಸ್ಥಾನದಲ್ಲಿ ಕಳೆದ 25 ವರುಷಗಳಿಂದ ಎಲ್ಲಾ ಭಾಗದಲ್ಲಿಯೂ ಅಭಿವೃದ್ಧಿಯು ಹೆಚ್ಚುತ್ತಾ ಬಂದಿರುವುದರಿಂದ ವಿವಿಧದ ವರ್ತಮಾನಗಳನ್ನೂ ತಿಳಿದುಕೊಳ್ಳಬೇಕೆಂಬ ಕುತೂಹಲವು ಹುಟ್ಟುವುದಕ್ಕೆ ಬಹುಮಟ್ಟಿಗೆ ಸಹಕಾರಿ

ತು. ಕೆಲವು ವರ್ಷಗಳ ಹಿಂದೆ ಪ್ರಚಾರವಾಗುತ್ತಿದ್ದದಕ್ಕಿಂತ ಹೆಚ್ಚು ಸಂಖ್ಯೆಯ ಪತ್ರಿಕೆಗಳು ಈಗ ಪ್ರಚಾರವಾಗುತ್ತಿರುವುದು ಮಾತ್ರವೇ ಅಲ್ಲ ; ಒಂದೊಂದು ಪತ್ರಿಕೆಯ ಪ್ರತಿಗಳೂ ತತ್ಸಾಪಿ ದೇಶಭಾಷಾ ಪತ್ರಿಕೆಗಳ ಪ್ರತಿಗಳೂ ಸಂಖ್ಯೆಯಲ್ಲಿ ಹೆಚ್ಚಿವೆ. ಬ್ರಿಟಿಷ್ ಇಂಡಿಯಾದಲ್ಲಿಯಂತೆಯೇ ಮೈಸೂರು ಸಂಸ್ಥಾನದಲ್ಲಿಯೂ ವರ್ತಮಾನ ಪತ್ರಿಕೆಗಳು ಹಿಂದೆ ಇದ್ದುದಕ್ಕಿಂತ ಈಗ ಹೆಚ್ಚು ಗುರುತ್ವವುಳ್ಳವುಗಳಾಗಿವೆ ಎಂಬುದು ಸ್ವತಸ್ಸಿದ್ಧವಾದ ಅಂಶವಾಗಿರುವುದು. ಈ ಸಂಸ್ಥಾನದ ಜನಸಂಖ್ಯೆಯಲ್ಲಿ ಬಹುಮಂದಿಯಾದ ಒಕ್ಕಲಿಗರ ಮಂಡಲಿಗೆ ನಾನು ಸೇರಿದವನಾದುದರಿಂದಲೂ, ಅಲ್ಲದೆ ಆಗಿರುವುದರಿಂದಲೂ ಸಾಮಾನ್ಯ ಜನರನ್ನು ಸಂಧಿಸಿ ಅವರ ಇಂಗಿತವು ಇಂತಹುದೇ ಎಂದು ತಿಳಿದುಕೊಳ್ಳಲು ನನಗೆ ಅನೇಕ ಸಮಯಗಳು ಲಭಿಸಿದ್ದುವು. ಅವರುಗಳಲ್ಲಿ ಹೊಸದಾಗಿ ಹುಟ್ಟಿರುವ ಜನಾಂಗದ ವಿಶೇಷವಾದ ವಿಚಾರವಾದ ಅಭಿಪ್ರಾಯಗಳು ದಿನೇದಿನೇ ವೃದ್ಧಿಹೊಂದುತ್ತಿರುವುದೆಂಬುದನ್ನೂ ವರ್ತಮಾನಪತ್ರಿಕೆಗಳಲ್ಲಿ ಪ್ರಚುರವಾಗುವ ಲೇಖನಗಳಿಂದ ಸವರೀ ಅಭಿಪ್ರಾಯಗಳು ಬಹಮಟ್ಟಿಗೆ ಮೂರ್ತಿಯುವುವಂಬುದನ್ನು ನಾವೆಲ್ಲರೂ ಬಲ್ಲೆವು. ಅನೇಕ ಸಂದರ್ಭಗಳಲ್ಲಿ ತಮ್ಮ ಮಾತೃಭಾಷೆಯನ್ನು ಓದಿ ಬರೆಯಲು ಮಾತ್ರ ಕಲಿತಿರುವ ಕೆಲವು ದೇಶಭಾಷಾಪತ್ರಿಕೆಗಳಲ್ಲಿ ಪ್ರಚುರವಾಗುವ ತಪ್ಪು ವಿಷಯಗಳನ್ನೇ ವಿಚಾರಶೂನ್ಯರಾಗಿ ನಂಬಿ ಅಂತಹ ಪತ್ರಿಕೆಗಳಲ್ಲಿ ಕೊಟ್ಟಿರುವ ತಪ್ಪು ವಿಷಯಗಳ ಆಧಾರವಮೇಲೆ ಈ ಸಂಸ್ಥಾನಕ್ಕೂ ಸರ್ವಾಭೌಮ ಸರ್ಕಾರಕ್ಕೂ ಸಂಬಂಧಪಟ್ಟ ರಾಜಕೀಯ ವಿಷಯಗಳನ್ನು ಚರ್ಚಿಸುತ್ತಿರುವುದನ್ನು ಕಂಡು ನನಗೆ ಕೇವಲ ವಿಸ್ಮಯವಾಯಿತು. ಸಾಮಾನ್ಯವಾಗಿ ಇಂತಹವುಗಳಲ್ಲಾ ವರ್ತಮಾನಪತ್ರಿಕೆಗಳಲ್ಲಿ ಪ್ರಚುರವಾಗುವ ಸಂಗತಿಗಳು ಎಷ್ಟರಮಟ್ಟಿಗೆ ಸಂಬಂಧಕ್ಕೆ ಅರ್ಹವಾಗುವುಗಳಂಬುದನ್ನು ಕಂಡು ಹಿಡಿಯುವಷ್ಟರ ವಿವೇಚನೆಯಿಲ್ಲದೆ ಅವುಗಳೇ ಗೆಜೆಟ್ಟಿನಲ್ಲಿ ಸರ್ಕಾರದಮೂಲ ಘೋಷಿಸಿ ಮಾಡಲ್ಪಟ್ಟ ಸಂಗತಿಗಳು ಎಂದು ಭಾವಿಸುವಷ್ಟರಮಟ್ಟಿಗೆ ಸುಲಭವಾಗಿ ಸಂಬತಕ್ಕವರಾಗಿಯೂ, ವಿಷಯಜ್ಞಾನಶೂನ್ಯರಾಗಿಯೂ ಇರುವರು. ಸುಲಭವಾಗಿ ನಂಬತಕ್ಕವರೂ, ವಿಷಯಜ್ಞಾನ ಶೂನ್ಯರೂ ಆದ ಇಂತಹ ಸಾಮಾನ್ಯಜನರ ಮೆತ್ತು ಗ್ರಾಪಕಶಕ್ತಿಯನ್ನೂ ಪರಿಪಕ್ವವಾಗದ ಮನಸ್ಸನ್ನೂ ಉಳ್ಳ ಬಾಲಕರ ನಡೆನುಡಿಗಳನ್ನು ತಿದ್ದುವ ಕಾರ್ಯವನ್ನು ಈ ಸಂಸ್ಥಾನದಲ್ಲಿಯ ವರ್ತಮಾನಪತ್ರಿಕೆಗಳು ತತ್ಸಾಪಿ ದೇಶ ಭಾಷಾಪತ್ರಿಕೆಗಳು ಲೇಶವಾದರೂ ಕೈಕೊಂಡಿಲ್ಲವೆಂಬುದು ನನ್ನ ಕೋಚಕೀಯವಾದ ಅನುಭವವಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿಯ ತತ್ಸಾಪಿ ಗ್ರೇಟ್ ಬ್ರಿಟನ್ನಿನಲ್ಲಿಯ ಪ್ರಸಿದ್ಧ ಪತ್ರಿಕೆಗಳಾವುದೋ ಮನುಷ್ಯನ ಜೀವಮಾನದ ಪ್ರತಿಯೊಂದು ದಿವಸವಲ್ಲಿಯೂ ತುಂಬಾ ಪ್ರಯೋಜನಕರವಾದ ವಿಷಯಗಳನ್ನು ಪ್ರಕಟಿಸುವುದಲ್ಲದೆ ಪಾರ್ಲಮೆಂಟ್ ಎಂಬ ಮಂತ್ರಾಲೋಚನಾಸಭೆಗಿಂತ ನೇರವಾಗಿ ಪ್ರಜೆಗಳ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುವು. ಅತ್ಯುತ್ಕೃಷ್ಟತರವಾದ ಸಾಹಸ, ಗಾಂಭೀರ್ಯಶಕ್ತಿ, ವಿಷಯ ವಿವೇಚನಾಶಕ್ತಿ ಇವುಗಳುಳ್ಳವರೂ, ಪತ್ರಿಕೋದ್ಯೋಗವೆಂಬ ಪೂರ್ಣಾಸಕ್ತಿಯನ್ನು ವಹಿಸಿ ಪ್ರಜೆಗಳ ಅಭಿಪ್ರಾಯಗಳನ್ನು ಕ್ರಮಪಡಿಸುವುವರಲ್ಲಿಯೂ, ಪತ್ರಿಕೋದ್ಯೋಗದ ಗೌರವ ಸ್ಥಾನವನ್ನು ಕಾಪಾಡುವುದರಲ್ಲಿಯೂ ತಮ್ಮ ಜವಾಬ್ದಾರಿಯನ್ನು ಸಂಪೂರ್ಣವಾಗಿ ಬಲ್ಲವರೂ ಆದ ಜನರು ಪತ್ರಿಕೆಗಳ ಯಾಜಮಾನ್ಯವನ್ನೂ ಲೇಖನೋದ್ಯೋಗವನ್ನೂ ಕೈಗೊಂಡಿರುವುದೇ ಗ್ರೇಟ್ ಬ್ರಿಟನ್ನಿನಲ್ಲಿ ಪತ್ರಿಕೆಗಳು ತುಂಬಾ ಪ್ರಯೋಜನಕಾರಿಗಳಾಗಿರುವುದಕ್ಕೆ ಕಾರಣ.

ಮೈಸೂರು ಸಂಸ್ಥಾನದಲ್ಲಿ ಸಾಮಾನ್ಯವಾಗಿ ಎಲ್ಲಾ ವರ್ತಮಾನಪತ್ರಿಕೆಗಳೂ ತತ್ಸಾಪಿ ದೇಶಭಾಷಾ ಪತ್ರಿಕೆಗಳೂ ಸರ್ವತ್ಸಾನಾದೋಷರಹಿತಗಳಾಗಿಲ್ಲವೆಂದು ಖಂಡಿತವಾಗಿ ಹೇಳಬಹುದಾಗಿ ತೋರುತ್ತದೆ. ಕೆಲವು ವರ್ತಮಾನಪತ್ರಿಕೆಗಳನ್ನು ಅವುಗಳ ಯಾಜಮಾನ್ಯವನ್ನು ವಹಿಸಿರತಕ್ಕವರೂ, ಕಾರ್ಯದರ್ಶಿಗಳೂ, ಸಂಪಾದಕರೂ ಪ್ರಜೆಗಳ ಅಭಿಪ್ರಾಯಗಳನ್ನು ಕ್ರಮಪಡಿಸುವುದರಲ್ಲಿಯೂ, ಪತ್ರಿಕೋದ್ಯೋಗದ ಗೌರವಸ್ಥಾನವನ್ನು ಕಾಪಾಡುವುದರಲ್ಲಿಯೂ ತಮ್ಮ ಜವಾಬ್ದಾರಿಯನ್ನು ಸಂಪೂರ್ಣವಾಗಿ ಅರಿತುಕೊಂಡು ನಡೆಸುವುದಿಲ್ಲವೆಂದು ನನ್ನ ಅನುಭವಕ್ಕೆ ಬಂದಿರುವುದರಿಂದ ವಿಷಾದಿಸುತ್ತೇನೆ. ಇಂತಹ ವರ್ತಮಾನಪತ್ರಿಕೆಗಳ ಪ್ರಚಾರವನ್ನು ತಕ್ಕ ಬಂದೋಬಸ್ತಿನಲ್ಲಿಡದೆ ಹೋಗುವುದರಿಂದ ಉಂಟಾಗುವ ಅಥವಾ ಎಂದಿಗಾಗಲೀ ಉಂಟಾಗಬಹುದಾದ ಕೇಡು ಅಪಾರವಾದುದೆಂದು ನಾನು ಖಂಡಿತವಾಗಿ ತಿಳಿದಿರುತ್ತೇನೆ. ಈ ವಿಚಾರವಾಗಿ ಈಚೆಗೆ ಉತ್ತರದೇಶದಲ್ಲಿ ನಡೆದ ಸಿಡಿಮದ್ದಿನ ಗುಂಡುಗಳ ಘೋರಕೃತ್ಯಗಳಿಂದ ನಮಗೆ ಸಾಕಾದಷ್ಟು ಅನುಭವವು ದೊರೆತಿದೆ. ಈ ಪೈಕಿ ಶೈದಿಗಳೆಲ್ಲೊಬ್ಬನು ತಾನಾಗಿಯೇ ಒಪ್ಪಿಕೊಟ್ಟಿರುವ ಕೈಫಿಯತ್ತಿನ ಮೇರೆಗೆ ಮೇಲ್ಕಂಡ ಕೃತ್ಯಗಳಲ್ಲವೂ "ಯುಗಾಂತರ" ಎಂಬ ಪತ್ರಿಕೆಯಲ್ಲಿ ಬರೆದಿದ್ದ ರಾಜದ್ರೋಹಕರವಾದ ಲೇಖನಗಳಿಂದ ಉದ್ರೇಕವನ್ನು ಹೊಂದಿದ ಜನರು ಮಾಡಿರುವುಗಳಂದು ತಿಳಿಯಬಂದಿರುತ್ತದೆ. ಈ ಸಂಸ್ಥಾನದಲ್ಲಿ ಪ್ರಚುರವಾಗುವ ಕೆಲವು ವರ್ತಮಾನಪತ್ರಿಕೆಗಳಿಂದ ಆರಿಸಿರುವ ಲೇಖನಗಳನ್ನು ನೋಡಲಾಗಿ ಈ ಪೈಕಿ ಕೆಲವು ಪತ್ರಿಕೆಗಳಿಂದ ಆಗಬಹುದಾದ ಕೇಡಿನ ವಿಚಾರವಾಗಿ ನನಗೆ ದೊರೆತಿರುವ ಅನುಭವಕರವಾದ ಅನುಭವವೇ ಸ್ಥಿರಪಡುತ್ತದೆ. ಸಾರ್ವಜನಿಕ ವಿಷಯಗಳ ವಿಚಾರವಾಗಿ ವಾಸ್ತವವಾದ ಮತ್ತು ಸಾರವಾದ ವರ್ತಮಾನಗಳನ್ನು ಪತ್ರಿಕೆಗಳವರೆಲ್ಲರೂ ನಿರಾಯಾಸವಾಗಿ ತಿಳಿದುಕೊಳ್ಳುವುದಕ್ಕೆ ವಿಶೇಷ ಸಾಲ[illegible] ಕಲ್ಪಿಸಿರುವುದನ್ನು ಇಂತಹ ಸಾಲಭ್ಯದ ಪ್ರಯೋಜನಗಳನ್ನು ಪಡೆದುಕೊಳ್ಳಿರೆಂದು ಕೆಲವು ಪತ್ರಿಕಾಧಿ

ಕಾರಿಗಳಿಗೂ ಕಾರ್ಯದರ್ಶಿಗಳಿಗೂ ಸಂಪಾದಕರಿಗೂ ತಿಳಿಸಿದರೂ ಕೂಡ ಅವರು ಹಾಗೆ ಪಡೆದುಕೊಳ್ಳದೆ ಹೋದ ರೆಂಬ ವಿಷಯವನ್ನು ಪರಿಶೀಲನೆ ಮಾಡಿನೋಡಿದಲ್ಲಿ ಪ್ರಜಾಕ್ಷೇಮವನ್ನು, ಪತ್ರಿಕೋದ್ಯೋಗದ ಗೌರವವನ್ನು ಕಾಪಾಡುವುದರಲ್ಲಿ ತಮಗೆ ವಿಶೇಷ ಜವಾಬ್ದಾರಿಯು ಉಂಟೆಂಬುವುದನ್ನು ಅರಿತುಕೊಂಡಿಲ್ಲವೆಂಬುದು ವಿಶದವಾಗುವುದು.

ಈಗೀಗ ಅಕಾರವನ್ನು ಹೊಂದುತ್ತಾ ಇರುವ ಜನಾಂಗದ ಏಳಿಗೆಯೆಂಬ ಅಂಕುರವು ಪ್ರಬಲಿಸುವುದಕ್ಕೆ ಸಹಾಯ ಮಾಡುವುದೂ ರಾಜದ್ರೋಹಕರವಾದ ವಿಷಯಗಳ ಲೇಖನ ಮತ್ತು ಬೋಧಕನ ದುಷ್ಪ್ರಯತ್ನಗಳು ಸಫಲವಾಗದಂತೆ ಅಡ್ಡಿಪಡಿಸುವ ಮಾರ್ಗಗಳಲ್ಲಿಯೇ ಅಂತಹ ಏಳಿಗೆಯು ಸಿದ್ಧಿಸುವುದಕ್ಕಾಗಿ ಮಾಡಲ್ಪಡುತ್ತಿರುವ ಸಾಹಸಗಳೆಲ್ಲವೂ ವರ್ತಿಸುವಂತೆ ಮಾಡುವುದೂ ಯಕ್ತಾಯುಕ್ತ ವಿವೇಚನೆಯುಳ್ಳ ಮತ್ತು ದೇಶವತ್ಸಲನಾವ ಪ್ರತಿಯೊಬ್ಬನ ಕರ್ತವ್ಯವಾಗಿರುವುದು.

ಮೈಸೂರು ಸಂಸ್ಥಾನದಲ್ಲಿಯ ವರ್ತಮಾನಪತ್ರಿಕೆಗಳನ್ನು ಸಾಮಾನ್ಯವಾದ ಹತೋಟಿಯಲ್ಲಿಟ್ಟುಕೊಂಡಿರುವುದಕ್ಕೂ ತನ್ಮೂಲಕ ರಾಜದ್ರೋಹಕರವಾದ ವಿಷಯಗಳನ್ನು ಪ್ರಸರಿಸುವ ಮತ್ತು ತಮಗೆ ಇರುವ ಸ್ವಾತಂತ್ರ್ಯಕ್ಕೆ ಬದಲಾಗಿ ಅಡ್ಡಿಯೇ ಇಲ್ಲದೆ ಮೆರ್ಯಾವಾತಿಕ್ರಮಣೆಯನ್ನು ಅನುಸರಿಸಿರುವ ಪತ್ರಿಕೆಗಳ ವಿಚಾರವಾಗಿ ತಕ್ಕ ಅ ಮಲುಗಳನ್ನು ನಡೆಸುವುದಕ್ಕೂ ಸರ್ಕಾರದವರಿಗೆ ತಕ್ಕ ಅಧಿಕಾರವನ್ನು ವಹಿಸುವುದೇ ಈ ಬಿಲ್ಲಿನ ಮುಖ್ಯೋದ್ದೇಶವಾಗಿರುವುದು. ಈ ಬಿಲ್ಲಿನ ಮುಖ್ಯಸರತ್ತುಗಳನ್ನು ಸಭಾಸಮೇತರಾದ ಗವರ್ನರ್ ಜನರಲ್‌ರವರ ಅಧಿಕಾರಕ್ಕೊಳಪಟ್ಟ ಬ್ರಿಟಿಷ್ ಇಂಡಿಯಾದ ಹೊರಭಾಗದಲ್ಲಿರುವ ಎಲ್ಲಾ ಸ್ವಾಸ್ಥ್ಯಗಳಲ್ಲಿಯೂ 1891ರ ಲಾಗಾಯಿತು ಜಾರಿಯಲ್ಲಿರುವ ರೆಗ್ಯುಲೇಷನಿನಿಂದ ತೆಗೆದುಕೊಳ್ಳಲಾಗಿದೆ. ಮೇಲ್ಕಂಡ ರೆಗ್ಯುಲೇಷನು ಜಾರಿಯಲ್ಲಿರುವ ಪ್ರದೇಶಗಳಲ್ಲಿ ಯಾವುದೊಂದು ವರ್ತಮಾನ ಪತ್ರಿಕೆಯ ಪ್ರಚಾರವನ್ನು ನಿರ್ಮೂಲಮಾಡುವುದಕ್ಕಾಗಲೀ ಪತ್ರಿಕಾ ಸ್ವಾತಂತ್ರ್ಯವನ್ನು ಅಡ್ಡಿಪಡಿಸುವುದಕ್ಕಾಗಲೀ ಯಾವಾಗಲೂ ಸಂಭವವು ಬದಗಲಿಲ್ಲ.

ಈ ಬಿಲ್ಲನ್ನು ಕಾನೂನಾಗಿ ಏರ್ಪಡಿಸುವುದರಿಂದ ಗೌರವ್ಯವಾವ ಪತ್ರಿಕೋದ್ಯೋಗದಲ್ಲಿ ನಿರತನಾವ ಪ್ರತಿಯೊಬ್ಬ ಮನುಷ್ಯನಿಗೂ ಪ್ರಜಾ ಕ್ಷೇಮಕ್ಕಾಗಿ ತನ್ನ ಜವಾಬ್ದಾರಿಯು ಎಷ್ಟು ಮಹತ್ವದ್ದೆಂಬುದನ್ನೂ, ಸದರೀ ಪತ್ರಿಕೋದ್ಯೋಗವು ಅನಾದಿಯಿಂದಲೂ ಎಷ್ಟು ಗೌರವ್ಯವಾದುದೆಂಬುದನ್ನೂ ಅರಿತುಕೊಳ್ಳುವುದಕ್ಕೆ ಸಹಕಾರಿಯಾಗಿರುವುದಲ್ಲದೆ ತನ್ನ ಕರ್ತವ್ಯವನ್ನು ತಪ್ಪಿನಡೆದಲ್ಲಿ ಪ್ರಜೆಗಳ ಹೇಳನೆಗೆ ಮಾತ್ರವೇ ಅಲ್ಲದೆ ಕಾನೂನಿನ ದಂಡನೆಗೂ ಗುರಿಯಾಗಬೇಕಾಗಿರುವುದೆಂಬುದನ್ನು ಪದೇ ಪದೇ ಅತನ ಸ್ಮೃತಿಗೆ ತರುತ್ತಿರುವುದು. ಇದನ್ನು ಅತನು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಳ್ಳುವುದರಿಂದ ಪತ್ರಿಕೋದ್ಯೋಗದ ಅನಾದಿಯಾದ ಘನತೆಯನ್ನು ಅತನು ಕಾಪಾಡಿಕೊಳ್ಳುವಂತೆಯೇ ಆಗುವುದು. ತನ್ಮೂಲಕ ದಿನೇದಿನೇ ಪ್ರಜೆಗಳ ಕ್ಷೇಮಕ್ಕೆ ತುಂಬಾ ಸಹಕಾರಿಯಾಗುವುದು.

ರಾಜದ್ರೋಹವೆನ್ನು ಮುಚ್ಚುಮರೆಯಿಲ್ಲದೆ ಬೋಧಿಸಿ ಆ ಮೂಲಕ ದೇಶದಲ್ಲಿ ಅನಾಯಕತ್ವವನ್ನು ಪ್ರಸರಿಸುತ್ತಾ ಜನಮಂಡಲಿಗೂ ಸರ್ಕಾರಕ್ಕೂ ವಿಕರೂಪವಾಗಿ ಹೇಯವಾಗಿರುವಂತಹ ವರ್ತಮಾನಪತ್ರಿಕೆಗಳ ಪ್ರಚಾರವನ್ನು ಅಡ್ಡಿ ಪಡಿಸುವುದೇ ಈ ಬಿಲ್ಲಿನ ಉದ್ದೇಶವಾಗಿರುವುದೆಂದು ನನಗೆ ನಂಬಿಕೆಯು ಹುಟ್ಟಿರುವುದರಿಂದ ಈ ಮಸೂದೆಯ ಪರವಾಗಿ ನನ್ನ ಮನಃಪೂರ್ವಕವಾದ ಸಮ್ಮತಿಯನ್ನು ಕೊಡುತ್ತೇನೆ.

ಮಿ॥ ಭಾಭಾಯವರು—ಪ್ರಕೃತ ಪರ್ಯಾಲೋಚನೆಯಲ್ಲಿರುವ ಮಸೂದೆಯ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಲು ನನಗೆ ಅನುಜ್ಞೆಯನ್ನು ದಯಪಾಲಿಸುವುದಾದರೆ ಸರ್ಕಾರದವರ ರಾಜ್ಯಾಡಳಿತವ ಕಾರ್ಯಕ್ಕೂ, ಸಂಸ್ಥಾನದಲ್ಲಿ ಪವರ್ಧಮಾನಕ್ಕೆ ಬರುತ್ತಿರುವ ಬಾಲಕರ ನಡತೆಗೂ ಸಮಂಜಸವಾಗಿ ನಡೆಸಲ್ಪಡದೆ ಇರುವ ಕೆಲವು ವರ್ತಮಾನಪತ್ರಿಕೆಗಳು ಅನೇಕ ಸಂವತ್ಸರಗಳಿಂದ ತುಂಬಾ ಕುಂದನ್ನು ಉಂಟುಮಾಡಿರುವ ವಿಧಾನಗಳಿಗೆ ಸಂಬಂಧಪಟ್ಟ ಎರಡು ಅಂಶಗಳನ್ನು ಮುಖ್ಯವಾಗಿ ತಿಳಿಸಲಪೇಕ್ಷಿಸುವೆನು.

ದೊಡ್ಡ ದೊಡ್ಡ ಅಧಿಕಾರಿಗಳು ಪ್ರಜೆಗಳಿಗಾಗಿ ಮಾಡುವ ಕಾರ್ಯಗಳಿಗೆ ಅತ್ಯಂತ ಚಮತ್ಕಾರವಾದ ವ್ಯಾಖ್ಯಾನಗಳನ್ನು ಕಲ್ಪಿಸುವುದರ ಮೂಲಕ ಆ ಕಾರ್ಯಗಳು ಇಂತಹವೆಂದು ಗುರ್ತಿಸಲಾಗದಂತೆ ಅವುಗಳ ಹುಟ್ಟನ್ನೇ ಅಡಗಿಸುತ್ತಾ, ಸದರೀ ಅಧಿಕಾರಿಗಳು ಸಂಸ್ಥಾನದ ಮತ್ತು ಪ್ರಜೆಗಳ ಅಭ್ಯುದಯಕ್ಕಾಗಿ ತಮ್ಮ ಕರ್ತವ್ಯವನ್ನು ಮಾತ್ರವೇ ನಡೆಯಿಸುತ್ತಿದ್ದರೂ ಅನ್ಯಾಯವಾಗಿಯೂ ನಿಷ್ಕರುಣೆಯೊಡನೆಯೂ ಅನೇಕ ತರಹೆಯ ಉದ್ದೇಶಗಳನ್ನು ಅವರುಗಳಿಗೆ ಆರೋಪಿಸುತ್ತಾ ಬರುವುದನ್ನೇ ಸ್ವಲ್ಪವೂ ಜವಾಬ್ದಾರಿಯೆನ್ನುವುದೇ ಇಲ್ಲದೆ ನಾನಾ ವಿಧ ದುರ್ಭಾಷಣೆಯನ್ನು ಪಯೋಗಿಸುವ ಲೇಖಕರು ತಮ್ಮ ನಿಯಮಿತ ಕಾರ್ಯವಾಗಿಟ್ಟುಕೊಂಡಿದ್ದಾರೆ. ಇವರುಗಳು ಅಧಿಕಾರಿಗಳನ್ನು ಹೇಳನೆಗೆ ಗುರಿಮಾಡುವುದಕ್ಕೆ ಅಥವಾ ತಮಗೆ ಯಾವ ಅಧಿಕಾರಿಗಳು ಸರಿಬೀಳುವುದಿಲ್ಲವೋ ಅಂತಹ ಮೇಲೆ ತಮಗಿರುವ ಮಾತ್ಸರ್ಯವನ್ನು ತೀರಿಸಿಕೊಳ್ಳುವುದಕ್ಕೆ ಮಾತ್ರವೇ ವಾಸ್ತವವಾಗಿಯೂ ಸ್ವಲ್ಪವೂ ಆಧಾರವೇ ಇಲ್ಲದ ವಿಷಯಗಳನ್ನೆಲ್ಲಾ ಕ್ರಮತಪ್ಪುವೆ ತಮ್ಮ ವಕ್ರ ಬುದ್ಧಿಯಿಂದ ಕಲ್ಪನೆ ಮಾಡುವರು. ಕೆಲವು ವರ್ತಮಾನಪತ್ರಿಕೆಗಳವರು ಈ ರೀತಿ ಸರ್ಕಾರದ ಅಧಿಕಾರಿಗಳ ನಡತೆಯ ಮತ್ತು ಕಾರ್ಯಗಳ ವಿಚಾರವಾಗಿ

ನು ಕ್ರಮದಲ್ಲಿ ದುರ್ಭಾಷಣೆಯನ್ನು ಉಪಯೋಗಿಸುತ್ತಾ ಬಂದಿರುವುದರಿಂದ ಅವರುಗಳ ದರ್ಪವನ್ನು ಸಹಿಸು ವುದಕ್ಕೂ, ಅವರ ಇಲಾಖೆಗಳ ನೀತ್ಯನುಶಾಸನವನ್ನು ಪಡಗಡಿಸುವುದಕ್ಕೂ ಆಕರವಾಗಿರುವುದು. ವಾಸ್ತವಾಂ ಶಗಳನ್ನು ತಿಳಿದುಕೊಳ್ಳುವ ಸಾಧನವು ಇವರುಗಳಿಗೆ ಸುಲಭಸಾಧ್ಯವೇ ಆಗಿದ್ದರೂ ಅದನ್ನು ಉಪಯೋಗಿಸಿಕೊ ಳ್ಳುವುದಕ್ಕೆ ಲೇಶಮಾತ್ರವೂ ಪ್ರಯತ್ನಿಸದೆ ಸಂಗತಿಗಳನ್ನು ತಪ್ಪು ತಪ್ಪಾಗಿ ಪ್ರಕಟಿಸುವುದರಮೂಲಕ ಅಧಿಕಾರಿಗ ಳನ್ನೆಲ್ಲಾ ಹೇಳನೆಗೆ ಗುರಿಮಾಡುವುದರಲ್ಲಿ ಸಂತೋಷಿಸುತ್ತಾರೆ; ಅಲ್ಲದೆ ಸುಳ್ಳು ಘಿರ್ಯಾದುಗಳನ್ನು ಕೊಡುವೆಂತೆಯೂ, ಅಧಿಕಾರಿಗಳಿಗೆ ಅವಿಧೇಯತ್ವವನ್ನು ತೋರ್ಪಡಿಸುವೆಂತೆಯೂ ಉತ್ತೇಜನವನ್ನು ಕೊಡುವುದರಲ್ಲಿಯೂ ಕೈಕಳ ಗಣ ಅಧಿಕಾರಿಗಳು ಮುಖ್ಯಾಧಿಕಾರಿಗಳಿಗೆ ತೋರಿಸಬೇಕಾದ ಭಕ್ತಿವಿಶ್ವಾಸಗಳನ್ನು ಹಾಳುಮಾಡುವುದರಲ್ಲೂ ನಲಿ ದಾಡುತ್ತಾರೆ. ಅಚ್ಚುಹಾಕಿದ ಸಂಗತಿಗಳಲ್ಲಿ ತುಂಬಾ ನಂಬಿಕೆಯನ್ನಿಟ್ಟಿರುವ ಸುಲಭವಾಗಿ ಮರುಳಾಗುವ ಮೂಢ ಜನರು ಸರ್ಕಾರಿ ಅಧಿಕಾರಿಗಳನ್ನು ತಮ್ಮ ಶತ್ರುಗಳೇ ಹೊರತು ತಮ್ಮ ಅಭ್ಯುದಯವನ್ನು ಪೆಚ್ಚಿಸುವ ಪ್ರಯತ್ನ ದಲ್ಲಿ ಪ್ರಾಮಾಣಿಕತನದಿಂದ ತಮ್ಮ ಕರ್ತವ್ಯವೆನ್ನು ಮಾಡುತ್ತಿರುವ ಕ್ಷೇಮಚಿಂತಕರಲ್ಲವೆಂದು ಭಾವಿಸುವಂತೆ ಅವ ರಿಗೆ ಭೋಧಿಸುತ್ತಿರುತ್ತಾರೆ. ರಾಜ್ಯಾಡಳಿತದ ಕಾರ್ಯವನ್ನು ನಡೆಸಬೇಕಾದರೆ ಪರಸ್ಪರ ವಿರೋಧಗಳಾದ ಪಕ್ಷ ಪಾತ್ಯತೆಗಳನ್ನು ನಿಷ್ಪಕ್ಷಪಾತವಾಗಿ ಇತ್ಯರ್ಥಮಾಡಬೇಕಾದ ಸಂಭವವು ಬೀಳುವುದರಿಂದ ಮೇಲ್ಪಟ್ಟ ಅಧಿಕಾರಿ ಗಳು ಮಾಡುವ ತೀರ್ಮಾನಗಳಿಂದ ಕೆಲವರಿಗೆ ಅತೃಪ್ತಿಯಾಗುವ್ರದು ಸಹಜವೇ ಆಗಿರುವುದರಿಂದ, ಈ ರೀತಿ ಅತೃಪ್ತಿ ಹೊಂದುವ ಪ್ರತಿಯೊಬ್ಬನೂ ಅಲ್ಪವಾವ ತೊಂದರೆಗಳನ್ನು ಉತ್ಪ್ರೇಕ್ಷಿಸಿ ವರ್ತಮಾನ ಪತ್ರಿಕೆಗಳಲ್ಲಿ ಭೋರಿಡು ವುದಕ್ಕೆ ಧಾರಾಳವಾಗಿ ಅವಕಾಶವನ್ನು ಕೊಡುತ್ತಾ ಬಂದಲ್ಲಿ ರಾಜ್ಯಾಡಳಿತದ ಕಾರ್ಯವು ಎಷ್ಟರಮಟ್ಟಿಗೆ ಪ್ರತಿಬಂ ಧಕವನ್ನು ಹೊಂದಿ ಕಷ್ಟತರವಾಗುವುದೆಂಬುದನ್ನೂ ನೀತ್ಯನುಶಾಸನವು ಎಷ್ಟರಮಟ್ಟಿಗೆ ಹಾಳಾಗುವುದೆಂಬುದನ್ನೂ ಸುಲಭವಾಗಿ ಗ್ರಹಿಸಬಹುದು.

ಇದೂ ಹಾಗಿರಲಿ. ಪ್ರವರ್ಧಮಾನರಾಗುತ್ತಿರುವ ನಮ್ಮ ದೇಶದ ಬಾಲಕರುಗಳ ಮನಸ್ಸುಗಳಾದರೋ ಈ ತರಹೆಯ ದುರ್ಭಾವೆಗಳನ್ನೊಳಗೊಂಡಿರುವ ವರ್ತಮಾನ ಪತ್ರಿಕೆಗಳಿಂದ ಮೆತ್ತಪ್ಪಟ್ಟು ಅಧೋಗತಿಗೆ ಇಳಿಯುವುವೆಂದು ನನಗೆ ತೋರುತ್ತದೆ. ಬಾಲ್ಯವು ಎಂತಹ ಕಾಲವೆಂದರೆ, ಅಸಾಧಾರಣವಾದ ವಿಷಯಗಳು ಮನಸ್ಸಿನಲ್ಲಿ ಉದ್ಭವಿಸುವ ಕಾಲ; ಊಹಾಶಕ್ತಿಯು ಚಮಕಿತವಾಗುವ ಕಾಲ; ಅಸಾಧ್ಯ ಕಾರ್ಯಗಳನ್ನು ಸಾಧಿಸಬೇಕೆಂದು ಯತ್ನಿಸುವ ಕಾಲ. ಕ್ರಮವಾಗಿ ಪರಿಪಕ್ವವನ್ನು ಹೊಂದದೆ ಇರುವ ಮನಸ್ಸು ಸ್ತಿಮಿತವನ್ನು ಹೊಂದದೆ ಇರುವ ನಡತೆಯೂ ವುಳ್ಳ ಬಾಲಕರಿಗೆ ಬುದ್ಧಿಯನ್ನು ಸಿಕ್ಕಿಷ್ಟ ಮಾರ್ಗದಲ್ಲಿ ಉಪಯೋಗಿಸತಕ್ಕವರು ಬರೆಯುವ ವಿಷಕರ ಲೇಖನಗಳು ಸದಾ ಕಾಲದಲ್ಲಿಯೂ ಉಪದೇಶಿಸಲ್ಪಟ್ಟುದೇ ಆದರೆ ಸರ್ಕಾರದ ಅಧಿಕಾರಿಗಳ ಮೇಲೆ ತಿರಿಗಿ ಬೀಳುವಂತೆ ಅವರ ಮನಸ್ಸನ್ನು ಎಷ್ಟು ಸುಲಭವಾಗಿ ಉದ್ರೇಕಿಸಬಹುದೆಂಬುದೂ, ಅವರ ಉದಾರವಾದ ಮನೋಭಾವವನ್ನು ಹೇಗೆ ಕೆಡಿಸಬಹು ದೆಂಬುದೂ, ಸ್ವೇಚ್ಛೆಯಾಗಿ ಘೋರಕೃತ್ಯಗಳನ್ನು ನಡೆಸುವುದೇ ದೇಶವಾತ್ಸಲ್ಯವ ಕುರುಹು ಎಂದು ತಪ್ಪು ಅಭಿ ಪ್ರಾಯಗಳನ್ನು ಅವರುಗಳ ಮನಸ್ಸಿನಲ್ಲಿ ಹುಟ್ಟಿಸಬಹುದೆಂಬುದು ವಿಶದವಾಗುವುದು. ಅಪ್ರಾಮಾಣಿಕವಾವ ದೇಶ ವಾತ್ಸಲ್ಯಕ್ಕೆ ಕೇಡಿಗಾಕರವಾವ ದಾಂಧಲೆಗಳಿಗೂ ಸ್ವಲ್ಪಮಾತ್ರವೂ ಗಮನ ಕೊಡದಂತೆ ಇರಬೇಕಾವ ಪೂರ್ವ ವಯಸ್ಕರಿಗೆ ತಪ್ಪುದಾರಿಗೆ ಎಳೆಯುವಂತಹ ಅಗ್ಗವಾವ ಪತ್ರಿಕೆಗಳು ದೌರ್ಭಾಗ್ಯವೆಶಾತ್ ನಿರಾಯಾಸವಾಗಿ ದೊರೆತುಹಕ್ಷ ಅವೇ ಅವರ ನಡತೆಯನ್ನು ಬಹುಮಟ್ಟಿಗೆ ಕೆಡಿಸುವುದರಲ್ಲಿ ತುಂಬ ಸಹಕಾರಿಯಾಗುವುದರಲ್ಲಿ ಸಂಶಯವೇ ಇಲ್ಲ. ನಿರಾಯಾಸವಾಗಿ ಸಿಕ್ಕುವ ಅಗ್ಗವಾದ ದೇಶೀಯ ಪತ್ರಿಕೆಗಳೇ ಬಾಲಕರ ಸದಾಚಾರಕ್ಕೂ ನಡತೆಗೂ ಅತ್ಯಂತ ಅಪಾ ಯಕರಗಳಾಗಿರತಕ್ಕುವುಗಳು. ನಿಷ್ಪಕ್ಷಪಾತತೆ, ಉದಾರಭಾವೆ ಇವುಗಳನ್ನು ದೂರೀಕರಿಸಿ ನಡೆಸಲ್ಪಡುತ್ತಿರುವುವು ಗಳು ಈ ಪತ್ರಿಕೆಗಳೇ. ಇಂತಹ ಪತ್ರಿಕೆಗಳು ಬಾಲಕರ ಪೂರ್ವ ವಯಸ್ಸಿನಲ್ಲಿ ಉಂಟುಮಾಡುವ ಅಭಿಪ್ರಾಯಗಳು ಅವರ ಅಪರ ವಯಸ್ಸಿನಲ್ಲಿ ಪರಿಪಕ್ವವಾಗಿ ಅವರನ್ನು ರಾಜದ್ವೇಷಿಗಳನ್ನಾಗಿಯೂ, ಅತೃಪ್ತರನ್ನಾಗಿಯೂ ಮಾಡು ವುವು. ದೈವವಶಾತ್ ಶ್ರೀಮನ್ಮಹಾರಾಜಾ ಸಾಹೇಬರುದ್ದುರವರ ಸರ್ಕಾರದವರು ಈ ತೆರನಾವ ಅಪಾಯವಿರುವುದೆಂ ಬುದನ್ನು ಪರಿಗಣಿಸಿ ಈ ಸಂಸ್ಥಾನದ ಪ್ರಜೆಗಳಿಗೆ ಅಪಕಾರವಾದ ಅಪಾಯವಾಗುವುದನ್ನು ನಿರೋಧಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಲೆತ್ನಿಸಿರುವರು.

ಈಗ ಜಾರಿಯಲ್ಲಿ ಬರುವುದರಲ್ಲಿರುವ ಮುಖ್ಯವಾದ ಕಾನೂನು ಜೇಯವಾದ ವರ್ತಮಾನ ಪತ್ರಿಕೆಗಳ ಹುಟ್ಟು ನ್ನೇ ಅಡಗಿಸುವುದಲ್ಲದೆ ಅವುಗಳಿಂದ ಈ ಸಂಸ್ಥಾನದ ಶಾಲಾ ವಿದ್ಯಾರ್ಥಿಗಳಿಗೂ ಅರಿವಿಲ್ಲದ ಪ್ರಜೆಗಳಿಗೂ ಉಂಟಾ ಗುತ್ತಿರುವ ಅಪಾರವಾದ ದುಷ್ಫಲಗಳನ್ನೂ ತಪ್ಪಿಸುವುದು. ಈದಿನ ಕೈಗೊಂಡಿರುವ ಕಾನೂನನ್ನು ಜಾರಿಯಲ್ಲಿ ತರುವುದಕ್ಕೆ ತಕ್ಕ ಕಾಲ ಇನ್ನೂ ಒದಗಿಲ್ಲವೆಂದು ಎಷ್ಟುಮಾತ್ರಕ್ಕೂ ಹೇಳತಕ್ಕದ್ದಲ್ಲ; ಈಗಾಗಲೆ ಕಾಲವಿಳಂಬವಾ ದೆ ಎಂದೇ ಹೇಳಬೇಕು; ಒಂದು ದಿನವಾಗಲೀ ಸಾವೆಕಾಶ ಮಾಡಕೂಡದು. ವರ್ತಮಾನ ಪತ್ರಿಕೆಗಳಿಗೆ ಅತಂಕವೆನ್ನು ದೇ ಇಲ್ಲದೆ ಪೂರ್ಣ ಸ್ವಾತಂತ್ರ್ಯವಿರಬೇಕೆಂದು ಬೋಧಿಸುವ ಜನರು ವ್ಯತಿರಿಕ್ತವಾವ ಅಭಿಪ್ರಾಯಗಳನ್ನು ಪಟ್ಟು ಲಿ; ಇಂಡಿಯಾ ದೇಶದ ತಾತ್ಕಾಲಿಕ ಸ್ಥಿತಿಯಲ್ಲಿ ರಾಜ್ಯಾಡಳಿತವನ್ನು ಸಮಂಜಸವಾಗಿ ನಡೆಸಬೇಕಾದರೆ

ಪ್ರವರ್ಧಮಾನಕ್ಕೆ ಬರುವಂತಹ ಬಾಲಕರ ವಿದ್ಯಾಭಿವೃದ್ಧಿಯನ್ನು ಪಾಂಗಿತವಾಗಿ ನೆರವೇರಿಸಬೇಕಾದರೂ ಸ್ವಲ್ಪವೂ ಜವಾಬ್ದಾರಿಯೆನ್ನುವುದೇ ಇಲ್ಲದೆ ದುರ್ಭಾಷೆಯ ಲೇಖನಗಳನ್ನು ಪ್ರಸರಿಸುವ ಪತ್ರಿಕೆಗಳ ಆತ್ಯಂಕವೇ ಇಲ್ಲದ ಮರ್ಯಾದಾತಿಕ್ರಮಣೆಯನ್ನು ಕೊನೆಗಾಣಿಸುವುದು ಖಂಡಿತವಾಗಿ ಅಗತ್ಯವಾಗಿರುವುದೆಂದು ನನಗೇನೋ ಸಂಪೂರ್ಣವಾಗಿ ನಂಬಿಕೆಯುಂಟಾಗಿದೆ.

ಮಿ॥ ವಿ. ಎಸ್. ನರಸಿಂಹೈಯಂಗಾರ್ರವರು—ಈ ವಿಷಯವನ್ನು ಕುರಿತು ಈಗ ಸಭಿಕರು ಅಪ್ಪಣೆ ಕೊಡಿಸಿದುದಕ್ಕೆ ಬಂದೆರಡು ಮಾತುಗಳನ್ನು ಹೆಚ್ಚಾಗಿ ಸೇರಿಸಲಪೇಕ್ಷಿಸುತ್ತೇನೆ.

ಇಂಡಿಯಾ ದೇಶದಲ್ಲಿ ದೇಶಯ ವರ್ತಮಾನಪತ್ರಿಕೆಗಳು ಹೊರಡುವುದಕ್ಕೆ ಆರಂಭವಾದ ಲಾಗಾಯಿತು ಅವುಗಳು ಅಭಿವೃದ್ಧಿಯಾಗುತ್ತಾ ಬಂದಿರುವುದನ್ನು ನಾನು ಬಹಳ ಜಾಗರೂಕತೆಯಿಂದ ನೋಡಿ ತಿಳಿದುಕೊಳ್ಳುತ್ತಾ ಬಂದಿರುವುದಲ್ಲದೆ ಪತ್ರಿಕಾಕರ್ತರಿಗೆ ಇರಬೇಕಾದ ಸ್ವಾತಂತ್ರ್ಯದ ವಿಷಯದಲ್ಲಿ, ಇಂಗ್ಲೆಂಡು ದೇಶದ ಪತ್ರಿಕಾಕರ್ತರು ಲಾಗಾಯಿತಿನಿಂದ ಇಟ್ಟುಕೊಂಡಿರುವ ಉದ್ದಾಮವಾದ ಅಭಿಪ್ರಾಯಗಳನ್ನೇ ಇಟ್ಟುಕೊಂಡಿರುತ್ತೇನೆ. ಜಾರ್ಜ್ ಬ್ರೈಟ್, ಮೆಕಾಲೆ, ಮೊದಲಾದ ಪ್ರಸಿದ್ಧರಾದ ಗ್ರಂಥಕರ್ತರೂ ಪ್ರಜ್ಞಾಶಾಲಿಗಳೂ ಹೇಳಿರುವುದೆಲ್ಲಾ ನನ್ನ ಮನಸ್ಸಿನಲ್ಲಿದೆ. ಅಲ್ಲದೆ ಇಲ್ಲಿನ ಸಂದರ್ಭಗಳು ಈಗಿರುವ ಹಾಗಿಲ್ಲದೆ ಬೇರೆಯಾಗಿದ್ದ ಪಕ್ಷದಲ್ಲಿ ಪತ್ರಿಕಾಕರ್ತರಿಗೆ ಸಾಧಾರಣವಾಗಿ ಇರಬೇಕಾದ ಸ್ವಾತಂತ್ರ್ಯವನ್ನು ಕಡಮೆಮಾಡುವುದಕ್ಕೆ ಯಾವ ನಿಯಮವನ್ನೇರ್ಪಡಿಸಿದ್ದರೂ, ಅಥವಾ ಹಾಗೆ ಏರ್ಪಡಿಸಲು ಪ್ರಯತ್ನಿಸಿದ್ದರೂ ಕೂಡ ನಾನು ಒಪ್ಪುತ್ತಿರಲಿಲ್ಲ. ಆದರೆ ಈಚಿಗೆ ನಡೆದಿರುವ ವಿದ್ಯಮಾನಗಳಿಂದ ನನಗಿದ್ದ ಈ ಅಭಿಪ್ರಾಯಗಳು ಬಹಳಮಟ್ಟಿಗೆ ದೂರವಾಗಿವೆ. ನಮ್ಮ ಇಂಡಿಯಾ ದೇಶೀಯ ವರ್ತಮಾನಪತ್ರಿಕೆಗಳ ಪೈಕಿ ಕೆಲವು ಪತ್ರಿಕೆಗಳು ಸ್ವಾತಂತ್ರ್ಯವನ್ನು ತೋರ್ಪಡಿಸುವುದಕ್ಕೆ ಬದಲಾಗಿ ನ್ಯಾಯವಿಹಿತವಾದ ಅಧಿಕಾರಕ್ಕೆ ಮೀರಿದ ನಡತೆಯನ್ನು ಪ್ರಕಾಶಪಡಿಸುತ್ತಾ ಬಂದಿವೆ. ಈಗ ಪತ್ರಿಕೆಗಳನ್ನು ಪ್ರಕಟಿಸೋಣವು—ಜನರಿಂದ ಅನ್ಯಾಯವಾಗಿ ಹಣವನ್ನು ಕಿತ್ತುಕೊಳ್ಳುವುದಕ್ಕೂ, ನಿರ್ವಂಚನೆಯಿಂದ ದೇಶದ ಸೇವೆಯನ್ನು ಮಾಡುತ್ತಿರುವಂಥಾ ವರ ಗೌರವವನ್ನು ಅನ್ಯಾಯವಾಗಿ ನಾಶಪಡಿಸುವುದಕ್ಕೂ, ಇಷ್ಟೇ ಅಲ್ಲದೆ ಪರಮಪವಿತ್ರವಾದ ರಾಜಪದವಿಗೂ ಈಗ ಆ ಪದವಿಯನ್ನು ಅಲಂಕರಿಸುತ್ತಿರುವ ಪ್ರಖ್ಯಾತರಾದ ನಮ್ಮ ಮಹಾರಾಜ ರಾಜಾಸಾಹೇಬ್ ಬಹದ್ದರವರ ಸಾನ್ನಿಧ್ಯಕ್ಕೂ ಕೂಡ ಅಗೌರವವನ್ನುಂಟುಮಾಡುವುದಕ್ಕೂ ದುರ್ವಿನಿಯೋಗಿಸಲ್ಪಟ್ಟು ಕೇವಲ ಹಾಸ್ಯಾಸ್ಪದವಾದ ಸ್ಥಿತಿಗೆ ಬಂದಿರುತ್ತದೆ. ಕಳದ ಮೂರುವರ್ಷಗಳಿಂದ ಪತ್ರಿಕೆಗಳಲ್ಲಿ ಬರುತ್ತಿರುವ ಕೆಲವು ಲೇಖನಗಳನ್ನು ಓದಿ ನಾಚಿಕೊಳ್ಳಬೇಕಾಗಿರುವುದಲ್ಲದೆ ಆದ್ಯಾಪಿ ಲಜ್ಜೆಯಿಂದ ತಲೆ ತಗ್ಗಿಸಬೇಕಾಗಿದೆ. ತತ್ರಾಪಿ ಮೈಸೂರು ಸಂಸ್ಥಾನದಲ್ಲಂತು ಈ ದಿವಸ ಬೆಳಿಗ್ಗೆ ನನ್ನ ಅವಗಾಹನೆಗೆ ತಂದ ಇಲ್ಲಿನ ಪತ್ರಿಕೆಗಳ ಕೆಲವು ಭಾಗಗಳನ್ನು ನೋಡುವಲ್ಲಿ ಮೈಸೂರು ದೇಶದ ವರ್ತಮಾನಪತ್ರಿಕೆಗಳಿಗೆ ಕೆಲವು ನಿರ್ಬಂಧಗಳನ್ನು ಕಲ್ಪಿಸಬೇಕೆಂದು ಈರೀತಿ ಸಲಹೆಕೊಡುವುದು ಅತ್ಯವಶ್ಯಕವೆಂಬುವುದು ಸ್ಪಷ್ಟಪಡುತ್ತದೆ.

ದೇಶಭಾಷೆಗಳಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳನ್ನೂ ಕೂಡ ನಾನು ಓದುತ್ತಾ ಬಂದಿದೇನೆ. ಈ ಪತ್ರಿಕೆಗಳಲ್ಲಿ ಕನ್ನಡದಲ್ಲಿ ಮಾತ್ರವೇ ಅಲ್ಲದೆ ತಮಿಳಿನಲ್ಲಿಯೂ ಕೂಡ ತುಚ್ಛವಾದ ಬರವಣಿಗೆಗಳು ಪ್ರಕಟವಾಗುತ್ತಿವೆ. ಸ್ವಸ್ಥಚಿತ್ತನಾದ ಯಾವ ಮನುಷ್ಯನೂ ಹೇಳಬಾರದಂಥಾ ಮಾತುಗಳನ್ನು ಇವುಗಳಲ್ಲಿ ಹೇಳಿ ಇದೆ. ಇಂಥಾ ಅನೇಕ ಪತ್ರಿಕೆಗಳನ್ನು ನಾನು ಓದುತ್ತಾ ಬಂದಿರುವುದರಿಂದ ಅಧಿಕಾರ ಪಡೆಯದೆ ಇಂಥಾ ಪತ್ರಿಕೆಗಳನ್ನು ಪ್ರಕಟಿಸುತ್ತಿರುವವರನ್ನು ಕೆಲವು ನಿರ್ಬಂಧಗಳಿಗೆ ಒಳಪಡಿಸಬೇಕಾದ ಪ್ರಕೃತವು ಈಗ ಬಂದಿದೆ ಎಂದು ನಿಸ್ಸಂದೇಹವಾಗಿ ಹೇಳಬಲ್ಲೆನು. ಈ ಪತ್ರಿಕೆಗಳಿಗೆ, ಎರಡುಕಡೆಯೂ ಹರಿತವಾಗಿರುವ ಆಯುಧದಂತೆ, ಅಪಾರವಾದ ಶುಭವನ್ನುಂಟುಮಾಡುವ ಶಕ್ತಿಯುಂಟು; ಮತ್ತು ಮಿ॥ ಬಾಬಾಯವರು ಈಗತಾನೆ ತಿಳಿಸಿದಹಾಗೆ ಇವುಗಳನ್ನು ದುರುಪಯೋಗ ಪಡಿಸಿದರೆ ಸದ್ಯದಲ್ಲಿ ಅಪರಿಮಿತವಾದ ಕೇಡುಂಟಾಗಬಹುದಲ್ಲದೆ ಇವು ಈಗಿನ ಹುಡುಗರ ಬುದ್ಧಿಯನ್ನು ವಕ್ರಗತಿಗೆ ತಿರುಗಿಸಿ ಮುಂದೆಯೂಕೂಡ ಬಹಳ ಕೇಡುಂಟಾಗಲು ಕಾರಣವಾಗುವವು.

ಈ ಬಿಲ್ಲಿನ ನಿಯಮಗಳ ವಿಷಯದಲ್ಲಿ—ಇತರ ಕಾನೂನನ್ನು ಉಲ್ಲಂಘಿಸಿದರೆ ಹೇಗೆ ನ್ಯಾಯಸ್ಥಾನದಲ್ಲಿ ವಿಚಾರಣೆ ನಡೆದು ತೀರ್ಮಾನವಾಗುತ್ತಿದೆಯೋ ಅದೇಪ್ರಕಾರ ಪತ್ರಿಕಾಪ್ರಕಟನೆಯನ್ನು ಸರಿಯಾಗಿ ನಡೆಸದೆ ಅತಿಕ್ರಮಿಸಿದಾಗಲೂ ನ್ಯಾಯಸ್ಥಾನದಲ್ಲಿ ಫೈಸಲಾಗಬೇಕೆಂದೂ, ಯಾವ ಮನುಷ್ಯನಾದರೂ ಅಪರಾಧಮಾಡಿರುವುದಾಗಿ ಕಂಡುಬಂದರೆ ಅವನನ್ನು ಕೋರ್ಟ್‌ನಲ್ಲಿ ವಿಚಾರಣೆಮಾಡಿ ಶಿಕ್ಷಿಸಬೇಕೆಂದೂ ಮೈರೆ ಕೆಲವರು ಹೇಳಿರುತ್ತಾರೆ. ಆದರೆ, ಈ ಕಾನೂನಿನಲ್ಲಿ ಇವುಗಳನ್ನೆಲ್ಲಾ ರಾಜಕೀಯವಾದ ತಕ್ಕೀರಾಗಿ ಭಾವಿಸಿ ಸದರೀ ತಕ್ಕೀರುದಾರನನ್ನು ದೇಶದಿಂದ ಗಡೀಪಾರು ಮಾಡಬೇಕೆಂದು ಉದ್ದೇಶಿಸಿರುವುದು ಯುಕ್ತವೆಂದು ನನಗೆ ತೋರುತ್ತದೆ. ಈ ವಿಧವಾದ ಶಿಕ್ಷೆಯು ಮೈಸೂರು ದೇಶದಲ್ಲಿ ಹಿಂದೆ ನಡೆಯದೇ ಇಲ್ಲ. ನಮ್ಮ ಹಿಂದಿನವರ ಕಾಲದಲ್ಲಿ ಕೂಡ ಕೆಲವು ತಕ್ಕೀರುದಾರರನ್ನು ದೇಶದಿಂದ ಗಡೀಪಾರು ಮಾಡಿರುವುದಾಗಿದೆ. ಇತರ ದೇಶಗಳಲ್ಲಿ ದಡ್ಡರೆಂದೂ, ಬೇಡದವರೆಂದೂ ಎಣಿಸಲ್ಪಟ್ಟಂಥಾ ಮಂದಿಗೆ ಮೈಸೂರು ದೇಶದಲ್ಲಿ ಎಂದಿಗೂ ಆಶ್ರಯ ಕೊಡಕೂಡದು.

ಇನ್ನೊಂದು ವಿಷಯವೇನೆಂದರೆ : ಸಾಮಾನ್ಯವಾಗಿ ಈ ಪತ್ರಿಕೆಗಳನ್ನು ನಡೆಸತಕ್ಕವರು ಯಾರು ? ಸಂಸ್ಕೃತದಲ್ಲಿ "ಭಗ್ನಾಃ ಕೃಷೇರ್ಭಾಗವತೋಭವಂತಿ" ಎಂದರೆ, ಇತರ ವೃತ್ತಿವ್ಯಾಪಾರಗಳಿಂದ ಜೀವನನಡೆಯದೇ ಇರತಕ್ಕಂಥಾ ಜನರು ಭಾಗವತರಾಗುತ್ತಾರೆಂದು ಒಂದು ಗಾದೆಯುಂಟು. ಸ್ವತಃ ಯಾವ ವಿದ್ಯೆಯೂ ಬಾರದಂಥಾ ಅನೇಕ ಉಪಾಧ್ಯಾಯರು ಹಳ್ಳಿಯ ಪಾಠಶಾಲೆಗಳನಿಟ್ಟುಕೊಂಡು ಇತರರಿಗೆ ವಿದ್ಯೆ ಹೇಳುತ್ತೇವೆಂದು ನಟಿಸುವುದಲ್ಲದೆ ಮುಂದೆ ಅಭಿವೃದ್ಧಿಗೆ ಬಂದು ದೊಡ್ಡವರಾಗಬೇಕಾದ ಈಗಿನ ಮಕ್ಕಳಿಗೂ ಕೂಡ ಪಾಠಹೇಳುವುದಾಗಿ ನಟಿಸುತ್ತಾರೆ. ಜನಸಾಮಾನ್ಯಕ್ಕೆ ಯಾವ ತರದ ಅಭಿಪ್ರಾಯಗಳಿರಬೇಕೆಂಬುದನ್ನು ನಾವೇ ಹೇಳಿಕೊಡುತ್ತೇವೆಂಬುದಾಗಿ ಮುಂಬರಿವ ಪತ್ರಿಕಾಸಂಪಾದಕರೆಂಬ ಇಂಥಾ ಕೆಲವು ಉಪಾಧ್ಯಾಯರಿಗೆ ಸಾಹಿತ್ಯದಲ್ಲಿಯೂ ಮನಶ್ಶಾಸ್ತ್ರದಲ್ಲಿಯೂ ಇರುವ ಜ್ಞಾನವನ್ನು ಪರ್ಯಾಲೋಚಿಸಿದರೆ ಇಂಡಿಯಾದೇಶದ ವರ್ತಮಾನಪತ್ರಿಕೆಗಳ ವಿಷಯದಲ್ಲಿ ಇತರರಿಗೆ ತಿರಸ್ಕಾರಬುದ್ಧಿಯು ಹುಟ್ಟಿದೆಯೆಂಬುದರಲ್ಲಿ ಆಶ್ಚರ್ಯವೇನು ?

ಇಂಥಾ ಪತ್ರಿಕಾಕರ್ತರು ಉನ್ನತಪದವಿಯಲ್ಲಿರತಕ್ಕಂಥಾ ಜನರಿಂದ ಎಂದರೆ, ದೊಡ್ಡದೊಡ್ಡ ಪದವಿಯಲ್ಲಿರುತ್ತಿರುವಂಥಾವರಿಂದ ಮಾತ್ರವೇ ಅಲ್ಲದೆ ಹಣಗಾರರಿಂದಲೂ ಕೂಡ ಅನ್ಯಾಯವಾಗಿ ಹಣವನ್ನು ಕೀಳುವದಕ್ಕೆ ಪ್ರಯತ್ನಿಸಿರುವ ಕೆಲವು ಸಂದರ್ಭಗಳು ನನ್ನ ತಿಳುವಳಿಕೆಗೆ ಬಂದಿವೆ. ಈ ನೀಚಕಾರ್ಯಕ್ಕೆ ಸ್ಕರ ಅನೇಕ ವೇಳಗಳಲ್ಲಿ ಪತ್ರಿಕೆಗಳನ್ನು ದುರ್ವಿನಿಯೋಗಿಸಿರುವುದಾಗಿದೆ.

ಹಿಂದೆ ನಾನು ಸ್ವಲ್ಪ ಸಂದೇಹಪಡುತ್ತಿದ್ದೆನು ; ಆದರೂ ಈಗ ಇಂಥಾ ನಿಯಮವನ್ನು ಏರ್ಪಡಿಸಬೇಕಾದ ಕಾಲವೊದಗಿದೆಯೆಂದು ನನಗೆ ತೋರುತ್ತದೆ. ಆದುದರಿಂದ ನಾನು ಈ ಬಿಲ್ಲನ್ನು ಮನಃಪೂರ್ವಕವಾಗಿ ಅನುಮೋದಿಸುತ್ತೇನೆ.

ರಾಜಮಂತ್ರಪ್ರವೀಣ ಮಿ॥ ಶ್ರೀನಿವಾಸ್ಅಯಂಗಾರ್ರವರು—ತಾವ್ರ ಭಯವಿಟ್ಟು ಅಪ್ಪಣೆಕೊಟ್ಟಲ್ಲಿ ಈ ಸಭೆಯವರ ಪರ್ಯಾಲೋಚನೆಯಲ್ಲಿರುವ ಕಾನೂನು ಜಾರಿಗೆ ಬರಲು ಕಾರಣವುಂಟೆಂದು ದೃಢಪಡಿಸಿ ಕೆಲವು ಮಾತುಗಳನ್ನು ಅರಿಕೆಮಾಡಲಪೇಕ್ಷಿಸುತ್ತೇನೆ. ಈಗ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿ ಮರ್ಯಾದೆಯನ್ನು ಮೀರಿರುವಂಥಾ ವರ್ತಮಾನಪತ್ರಿಕೆಗಳ ವಿಷಯವಲ್ಲಿ ಸರ್ಕಾರದವರು ಯಾವ ಕಾರ್ಯಭಾಗವನ್ನು ನಡೆಸುವದಕ್ಕೂ ಈಗಿರುವ ಕಾನೂನಿನಿಂದ ಅವರಿಗೆ ಅಧಿಕಾರಬಂದಿಲ್ಲ. ಈಗ ನಾವು ಪರ್ಯಾಲೋಚಿಸುತ್ತಿರುವ ಕಾನೂನಿನಿಂದ ಸರಿಯಾಗಿಯೂ ಗೌರವವಾಗಿಯೂ ನಡೆಸುತ್ತಿರುವ ಯಾವ ಪತ್ರಿಕೆಗಾಗಲಿ ಯಾವ ವಿಧವಾಗಿಯೂ ಬಾಧಕವಿಲ್ಲ. ತಾವು ಇರುವ್ರವರಿಂದ ಪ್ರಯೋಜನವುಂಟೆಂದು ತೋರ್ಪಡಿಸುವ್ರದಕ್ಕೆ ಪ್ರತಿಯಾಗಿ ತಮಗೆ ದೊರೆತ ಅವಕಾಶಗಳನ್ನೆಲ್ಲಾ ಏಕ ಪ್ರಕಾರವಾಗಿ ದುರುಪಯೋಗಪಡಿಸುವ ಪತ್ರಿಕೆಗಳಿಗೆ ಮಾತ್ರವೇ ಈ ಕಾನೂನು ಅನ್ವಯಿಸುತ್ತದೆ. ಇಂಥಾ ಕಾನೂನು ಇರಬೇಕಾದುದು ಅತ್ಯವಶ್ಯಕವೆಂಬುವ್ರದಕ್ಕೆ ಕಾರಣಗಳನ್ನು ಹೇರಳವಾಗಿ ತೋರಿಸಲಾಯಿತು. ಕೇವಲ ಅವಶ್ಯಕವಾದ ಮತ್ತು ಕೋಪ್ತೋದ್ರೇಕ ಉಂಟುಮಾಡತಕ್ಕ ಸಂದರ್ಭಗಳಲ್ಲಿ ಮೊರತು ಎಂದರೆ ಅನರ್ಥಕ್ಕೆ ಕಾರಣವಾಗುವಂತ ತೋರಿದಾಗ ಮೊರತು ಈ ಕಾನೂನನ್ನು ಜಾರಿಮಾಡುವುದಿಲ್ಲವೆಂಬುದಾಗಿ ಸರ್ಕಾರದವರೇ ನಂಬಿಕೆ ಕೊಟ್ಟಿರುತ್ತಾರೆ. ಹೀಗಿರುವ್ರದರಿಂದ ಈ ಕಾನೂನು ಪ್ರಜಾಕ್ಷೇಮಕ್ಕೆ ಅವಶ್ಯಕವೆಂದೂ, ನ್ಯಾಯಪರರಾದ ಸಮಸ್ತರಿಗೂ ಇದು ಯುಕ್ತವಾಗಿ ತೋರುವ್ರದೆಂದೂ ನಿಸ್ಸಂದೇಹವಾಗಿ ಹೇಳಬಲ್ಲೆನು.

ಆದುದರಿಂದ ನಾನು ಈ ಬಿಲ್ಲನ್ನು ಅನುಮೋದಿಸುತ್ತೇನೆ.

ದಿವಾನರವರು—ಈ ಕಾನೂನಿನ ವಿಷಯವಲ್ಲಿ ಕ್ರಮವರಿತು ಸಭಿಕರ ಸಮ್ಮತಿಗಳನ್ನು ಪಡೆಯುವ್ರದಕ್ಕೆ ಮುಂಚಿತವಾಗಿ ಕೆಲವು ಮಾತುಗಳನ್ನಾಡಲಪೇಕ್ಷಿಸುತ್ತೇನೆ. ಮೊದಲು ಹೇಳಬೇಕಾದುದೇನೆಂದರೆ, ಈ ಸಭೆಯಲ್ಲಿ ಸರ್ಕಾರಿ ಉದ್ಯೋಗಸ್ಥರಾದ ಮೆಂಬರುಗಳೂ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳೂ ಕೂಡ ಈ ಬಿಲ್ಲನ್ನು ಅನುಮೋದಿಸಿರುವ್ರದು ಪ್ರೀಮ್ಯೆ ಮಹಾರಾಜಾ ಸಾಹೇಬ್ ಬಹದ್ದರವರ ಸರ್ಕಾರದವರಿಗೆ ಬಹಳ ಸಂತೋಷಕ್ಕೆ ಕಾರಣವಾಗಿದೆ. ಪತ್ರಿಕಾಕರ್ತರು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ತಿಳಿದುಕೊಳ್ಳದೆ ಪತ್ರಿಕೆಗಳನ್ನು ಪ್ರಕಟಿಸುವ್ರದರಿಂದುಂಟಾಗುವ ಕೆಡಕು ದಿನೇದಿನೇ ಹೆಚ್ಚುತ್ತಿರುವ್ರದರಿಂದ ಪ್ರೀಮ್ಯೆ ಮಹಾರಾಜಾ ರಾಜಾಸಾಹೇಬ್ ಬಹದ್ದರವರ ಸರ್ಕಾರದವರು, 1894ನೆ ಇಸವಿಯಲ್ಲಿ ಬಂದು ಸುಲ ಮುಕುಂ ಕೊಟ್ಟಪ್ರಕಾರವೇ, ಈ ತರದ ಅಪರಾಧಗಳನ್ನು ಮಾಡುವ ಕೆಲವು ವರ್ತಮಾನ ಪತ್ರಿಕೆಗಳ ಮೇಲೆ ಸ್ಟೂಟಾಗಿ ಮುಕುಂ ಕೊಟ್ಟು ಅವುಗಳನ್ನು ಸರ್ಕಾರಕ್ಕೆ ದಾವಣವಾಗಿ ಜೇರಿಸಿಕೊಳ್ಳಬೇಕೆಂದು ಹಿಂದೆ ಯೋಚಿಸಿದ್ದರು. ಆದರೆ ಪುನಃ ಯೋಚಿಸಿದುದರಲ್ಲಿ, ವರ್ತಮಾನಪತ್ರಿಕೆಗಳ ಪ್ರಕಟನೆಯನ್ನು ಕ್ರಮಪಡಿಸುವ್ರದಕ್ಕೆ ಒಂದು ಕಾನೂನನ್ನು ಏರ್ಪಡಿಸಿ ಅದರಿಂದ ಈ ಬಗ್ಗೆ ಅಧಿಕಾರವನ್ನು ಪೊಂದುವದು ಉತ್ತಮವೆಂದು ತೀರ್ಮಾನಿಸಿದರು. ವರ್ತಮಾನಪತ್ರಿಕಾಕರ್ತರು ತಮ್ಮ ಸ್ವಾತಂತ್ರ್ಯವನ್ನು ಬಹಳವಾಗಿ ದುರುಪಯೋಗಪಡಿಸುತ್ತಿರುವುದರಿಂದಲೂ, ಇದರಿಂದ ಜನಸಾಮಾನ್ಯಕ್ಕೆ ಉಂಟಾಗುವ ಅಪಾಯವ್ರು ಬಹಳವಾಗಿ ಹೆಚ್ಚುತ್ತಿರುವುದರಿಂದಲೂ ನ್ಯಾಯವಿಧಾಯಕ ಸಭೆಯು ಸರ್ಕಾರಿ ಮೆಂಬರುಗಳೂ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳೂ ಸಹ ಸೇರಿ ಸರ್ಕಾರದವರು ಈ ರೆಗ್ಯುಲೇಷನಿನ ಮೂಲಕ ತೆಗೆದುಕೊಳ್ಳಬೇಕೆಂದಿರುವ ಅಧಿಕಾ

ರವನ್ನು ಅವರಿಗೆ ಕೊಡಿಸುವರೆಂದು ಪೂರ್ಣವಾಗಿ ಭರವಸೆಯಿದ್ದಿತು. ತಮ್ಮ ನಿರೀಕ್ಷೆಯು ಇಷ್ಟಮಟ್ಟಿಗೆ ಸಂ ಪೂರ್ಣವಾಗಿ ನೆರವೇರಿದುದಕ್ಕಾಗಿ ಶ್ರೀಮ್ಮೆ ಮಹಾರಾಜಾ ರಾಜಾಸಾಹೇಬ್ ಬಹದ್ದರವರ ಸರ್ಕಾರದವರಿಗೆ ಬಹಳ ಸಂತೋಷವೇ ಹೊರತು ಮತ್ತೆ ಬೇರೆ ಇಲ್ಲ. ತತ್ಕಾಪಿ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳು ಮೊತನಾಡದೆ ಸಮ್ಮತಿ ಕೊಡುವುದರಲ್ಲೇ ತೃಪ್ತರಾಗದೆ ಇಂಥಾ ರೆಗ್ಯುಲೇಷನು ಆಗಬೇಕಾದುದರ ಅವಶ್ಯಕತೆಯುಂಟೆಂದು ಅಂ ಗೀಕರಿಸಿ ಈ ಕಾನೂನಿನ ಮೂಲತತ್ವವನ್ನು ಮನಃಪೂರ್ವಕವಾಗಿ ಅನುಮೋದಿಸಿರುವುದು ಸದರೀ ಸರ್ಕಾರದವರಿಗೆ ವಿಶೇಷ ಸಂತೋಷಕ್ಕೆ ಕಾರಣವಾಗಿದೆ. ಸರ್ಕಾರದವರಿಗೆ ಅವರ ಅಪೇಕ್ಷೆಯ ಪ್ರಕಾರ ಈ ಅಧಿಕಾರಗಳನ್ನು ಕೊಡುವುದರಲ್ಲಿ ಯಾವ ಅಪಾಯವೂ ಇಲ್ಲವೆಂದು ಪ್ರಜೆಗಳಿಗೆ ಪೂರ್ಣವಿಶ್ವಾಸವುಂಟೆಂಬ ಅಂಶಕ್ಕೆ ಸರ್ಕಾರಿ ಉ ದ್ಯೋಗಸ್ಥರಲ್ಲದ ಮೆಂಬರುಗಳು ಈ ಬಿಲ್ಲನ್ನು ಇಷ್ಟು ಸುಲಭದಲ್ಲಿ ಅಂಗೀಕರಿಸಿದುದೇ ನಿದರ್ಶನವಾಗಿ ಇದೆ. ಶ್ರೀಮ್ಮೆಮಹಾರಾಜ ರಾಜಾಸಾಹೇಬ್ ಬಹದ್ದರವರ ಸರ್ಕಾರದವರು ಕೂಡ ಈ ರೆಗ್ಯುಲೇಷನಿನ ಮೇರೆ ಅಮಲ್ ನ ಡೆಸುವಲ್ಲಿ ಪ್ರಜೆಗಳಿಂದ ಈ ರೀತಿ ನಂಬಲ್ಪಡುವುದಕ್ಕೆ ತಮ್ಮವು ಸರ್ವಪ್ರಕಾರವಲ್ಲೂ ಅರ್ಹರೆಂದು ತೋರಿಸಲೆತ್ನಿಸು ವರೆಂದು ಈ ಸಭೆಯಲ್ಲಿರುವವರಿಗೂ ತದ್ವಾರಾ ಪ್ರಜಾ ಸಾಮಾನ್ಯಕ್ಕೂ ನಾನು ಭರವಸೆ ಕೊಡುತ್ತೇನೆ. ಮೈ ಸೂರು ಸೀಮೆಯಲ್ಲಿ ನಡೆಯುತ್ತಿರುವ ವರ್ತಮಾನಪತ್ರಿಕೆಗಳ ವಿಷಯದಲ್ಲಿ ಮೈಸೂರು ಸರ್ಕಾರದವರು ನಡೆದು ಕೊಳ್ಳುತ್ತಿರುವ ರೀತಿಯನ್ನು ಪರೀಕ್ಷಿಸುತ್ತಾ ಬಂದಿರುವಂಥವರಿಗೆ ಸದರೀ ವರ್ತಮಾನ ಪತ್ರಿಕಾಕರ್ತರು ಸರ್ಕಾ ರದವರನ್ನು ವಿಕರೀತಿಯಾಗಿ ದುರ್ಜನಮಾಡಿ ತೊಂದರೆ ಪಡಿಸುತ್ತಿದ್ದಾಗ್ಯೂ ಕೂಡ ಸರ್ಕಾರದವರು ಅಂಥಾ ಪತ್ರಿ ಕೆಗಳನ್ನು ಫೂಟು ಹುಕುಮಿನ ಮೂಲಕ ನಿಲ್ಲಿಸಿಬಿಡುವ ಅಧಿಕಾರವನ್ನು ನಿಸ್ಸಂದೇಹವಾಗಿ ಪಡೆದಿದ್ದೂ ಆ ರೀತಿ ಯಾಕೆ ಮಾಡಲೊಲ್ಲರೆಂದು ಆಶ್ಚರ್ಯವಾಗಿದ್ದೀತು. ಬೊಂಬಾಯಿ ಪ್ರಾಂತ್ಯದಲ್ಲಿ ಬಂದು ವಾರಗಟ್ಲೆಯ ವರ್ತಮಾನಪತ್ರಿಕೆಯನ್ನು ಇಂಗ್ಲೀಷಿನಲ್ಲಿ ಪ್ರಕಟಿಸುತ್ತಿರುವವರೂ ಯೂರೋಪಿನವರಲ್ಲಿಯೂ ಇಂಡಿಯಾದೇ ಶೀಯರಲ್ಲಿಯೂ ಗೌರವವನ್ನು ಸಂಪಾದಿಸಿರುವವರೂ ಆದ ಇಂಡಿಯಾದೇಶೀಯ ಪತ್ರಿಕಾಕರ್ತರೊಬ್ಬರು ಕೆಲವು ದಿವಸಗಳ ಹಿಂದೆ "ಬ್ರಿಟಿಷ್ ಸರ್ಕಾರದವರು ಧರ್ಮವಾಗಿ ಕೊಟ್ಟುದರಿಂದಲೇ ಇಂಡಿಯಾ ದೇಶದ ಪತ್ರಿಕಾಕರ್ತ ರಿಗೆ ಸ್ವಾತಂತ್ರ್ಯವುಂಟಾಯಿತು. ಬಹಳ ಅಭಿವೃದ್ಧಿಸ್ಥಿತಿಗೆ ಬಂದಿರುವ ದೇಶೀಯ ಸಂಸ್ಥಾನದಲ್ಲಿಯೂ ಕೂಡ ಈ ತರದ ಸ್ವಾತಂತ್ರ್ಯವಿಲ್ಲವೆಂದು ಹೇಳಿದರು." ಆದರೆ ಮೈಸೂರಿನಲ್ಲಿರುವ ಪತ್ರಿಕಾಕರ್ತರು ಹೀಗೆ ಸ್ವತಂತ್ರರಾಗಿ ರುವುದು ಮಾತ್ರವೇ ಅಲ್ಲದೆ ಮರ್ಯಾದೆ ಮೀರಿಯೂ ಕೂಡ ನಡೆಯುತ್ತಿದಾರೆಂಬುದು ಅವರಿಗೆ ತಿಳಿಯದೆಂದು ತೋರುತ್ತದೆ. ಈ ಸಂಸ್ಥಾನದಲ್ಲಿ ಪ್ರಕಟವಾಗುತ್ತಿರುವ ಎಲ್ಲಾ ವರ್ತಮಾನ ಪತ್ರಿಕೆಗಳ ಮೇಲೂ ಈ ರೀತಿ ದೋ ಷಾರೋಪಣೆ ಮಾಡಬೇಕೆಂಬುದು ಎಷ್ಟು ಮಾತ್ರಕ್ಕೂ ನನ್ನ ಉದ್ದೇಶವಲ್ಲ. ಆದರೂ ಈ ಸಂಸ್ಥಾನದಲ್ಲಿ ನಡೆ ಯುತ್ತಿರುವ ವರ್ತಮಾನಪತ್ರಿಕೆಗಳ ಪೈಕಿ ಕೆಲವು "ಇಂಡಿಯರ್ ನೇರ್ಷ" ಎಂಬ ವರ್ತಮಾನ ಪತ್ರಿಕೆಯ ಈ ಚಿನ ಸಂಚಿಕೆಯೊಂದರಲ್ಲಿ ವರ್ಣಿಸಲ್ಪಟ್ಟಿರುವ ಇಂಡಿಯಾದೇಶದ ಕೆಲವುವರ್ತಮಾನಪತ್ರಿಕೆಗಳನ್ನು ಹೋಲು ತ್ತವೆ. ಸದರೀ "ಇಂಡಿಯರ್ ನೇರ್ಷ" ಎಂಬ ಪತ್ರಿಕೆಯಲ್ಲಿ ಇಂಡಿಯಾ ದೇಶದಲ್ಲಿ ಗೌರವಕ್ಕೆ ಯೋಗ್ಯ ವಾದ ವರ್ತಮಾನಪತ್ರಿಕೆಗಳ ಲಕ್ಷಣಗಳನ್ನು ಮೊದಲು ವಿವರಿಸಿ ಆ ತರುವಾಯ ಇಂಗ್ಲೀಷ್ ಭಾಷೆಯಲ್ಲಿಯೂ ದೇಶಭಾಷೆಯಲ್ಲಿಯೂ ಬರೆಯಲ್ಪಡುತ್ತಿರುವ ಕೆಲವು ಪತ್ರಿಕೆಗಳನ್ನು ಕುರಿತು ಮುಂದೆ ಹೇಳಿರುವ ಪ್ರಕಾರ ಬರೆದಿದೆ :—

"ಆದರೆ ಈ ಪೈಕಿ ಇನ್ನೂ ಕೆಲವು ಪತ್ರಿಕೆಗಳು ಇಂಗ್ಲೀಷ್ ಭಾಷೆಯಲ್ಲಿ ಅಥವಾ ದೇಶಭಾಷೆಗಳಲ್ಲಿ ಯಾವುದರಲ್ಲಾದರೂ ಬರೆಯಲ್ಪಡುತ್ತವೆ. ಇವುಗಳನ್ನು ನಡೆಸತಕ್ಕವರು ಪೂರ್ಣ ವಿದ್ಯಾವಂತರಲ್ಲವಾದುದರಿಂದ ಈ ಪತ್ರಿಕೆಗಳು ಮನೋವಿಕಾರವನ್ನುಂಟುಮಾಡುವಂತಹ ಬರವಣಿಗೆಗಳಿಂದಲೇ ಜೀವಿಸಬೇಕು. ಬರವಣಿಗೆಯೆ ಲ್ಲೆಲ್ಲಾ ಕಟುವಾದ ಮಾತುಗಳಿಂದ ಬೈದಿರುವಂಥಾ ಬರವಣಿಗೆಯೇ ಅತ್ಯಂತ ಮನೋವಿಕಾರವನ್ನುಂಟುಮಾಡುತ್ತದೆ. ಆದುದರಿಂದ ಕೆಲವು ಪತ್ರಿಕಾ ಕರ್ತರಿಗೆ ಸರ್ಕಾರದವರನ್ನೂ ಇತರ ಜನರನ್ನೂ ದೂಷಣೆ ಮಾಡುವುದೇ ಬಂಡವಾಳ ವಾಗಿದೆ. ಈ ಪೈಕಿ ಕೆಲವರು ಸರ್ಕಾರದವರನ್ನು ದೂಷಿಸಿದರೂ ರಾಜದ್ರೋಹವು ತಮ್ಮಮೇಲೆ ಆಪಾದನೆಯಾ ಗದಂತೆ ಯಾವುವಾದರೂ ಒಂದು ವಿಧದಲ್ಲಿ ಜಾಗರೂಕತೆಯಿಂದ ದೂಷಣೆಮಾಡುತ್ತಾರೆ. ಇತರರಲ್ಲಿ ಇಷ್ಟಮಟ್ಟಿನ ಮುಂದಾಲೋಚನೆಯೂ ಧೂರ್ತತನವೂ ಇರುವುದಿಲ್ಲ. ಆದರೆ ಈ ವರ್ಗಕ್ಕೆ ಸೇರಿದ ಪತ್ರಿಕಾ ಕರ್ತರೆಲ್ಲರೂ ತಮಗೆ ಆಗದ ಜನರನ್ನು ಬೈಯುವುದರಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ವಹಿಸುತ್ತಾರೆ. ಹೀಗೆ ಬೈಯುವುದರಲ್ಲಿ ತಮ್ಮ ಮನಸ್ಸಿನಲ್ಲಿರುವ ದ್ವೇಷವನ್ನು ತೀರಿಸಿಕೊಳ್ಳಬೇಕೆಂಬುವುದೇ ಇವರ ಉದ್ದೇಶವು ; ಆ ಮನುಷ್ಯನ ಸ್ವಂತ ವಿಷಯಗಳನ್ನೆತ್ತಿ ದೂಷಿಸುವುದೇ ಇವರು ಮಾಡುವ ದೂಷಣೆ. ಇವರು ಅನೇಕವಾಗಿ ಸುಳ್ಳನ್ನೇ ಬರೆಯು ತ್ತಾರೆ. . . . . ಇವರಿಗೆ ಮುಖ್ಯವಾಗಿರುವ ಸಂತೋಷವೇನೆಂದರೆ ತಾವು ಇಂಥವರೆಂಬ ಗುಟ್ಟ ನ್ನು ಕೊಡದಹಾಗೆ "ನಾವು" ಎಂದು ಬರೆದುಕೊಳ್ಳುತ್ತಾ ಲೋಕವನ್ನೆಲ್ಲಾ ಆಡಿ ಅಳದು ಜನರನ್ನು ಬೈದು ತಾವು ತನೆಗೆ ಸಿಕ್ಕದೆ ತಪ್ಪಿಸಿಕೊಳ್ಳುವುದೇ".

ಕೆಲವು ಕಾಲವ ತರುವಾಯವಾದರೂ ಇಲ್ಲಿನ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗುವ ಬರವಣಿಗೆಗಳ ಸ್ವಭಾವವು ಉತ್ತಮಸ್ಥಿತಿಗೆ ಬರುವದೆಂದು ಹಿಂದೆ ನಿರೀಕ್ಷಿಸಬಹುದಾಗಿತ್ತು. ಆದರೆ ನಾನು ಮೇಳಿದ ವರ್ಗಕ್ಕೆ ಸೇರಿರುವ ಮೈಸೂರಿನ ವರ್ತಮಾನ ಪತ್ರಿಕಾಕರ್ತರು ತಮಗಿರುವ ಸ್ವಾತಂತ್ರ್ಯವೆನ್ನು ಸರಿಯಾಗಿ ತಿಳಿದುಕೊಂಡು ಸಂತೋಷಪಡುವುದಕ್ಕೆ ಒದಲಾಗಿ ತಮಗೆ ಶಿಕ್ಷೆಯಿಲ್ಲದೆ ಇರುವುದನ್ನು ಕಂಡು ಮತ್ತಷ್ಟು ಧೈರ್ಯಹೊಂದಿ ಸರ್ಕಾರವನ್ನೂ ಸರ್ಕಾರಿ ಅಧಿಕಾರಿಗಳನ್ನೂ ವಿಕಪ್ರಕಾರವಾಗಿ ಬೈಯುತ್ತಾ ಸುಳ್ಳುಗಳನ್ನೂ, ನಿಜವಾದ ಸಂಗತಿಗಳನ್ನು ಬೇರೆ ಅರ್ಥತೋರುವಂತೆ ಮಾರ್ಪಡಿಸಿ ಬರೆದಿರುವ ಬರವಣಿಗೆಗಳನ್ನೂ ಪ್ರಕಟಿಸಿ ಜನರ ಮನಸ್ಸನ್ನು ಕೆಡಿಸುತ್ತಿದ್ದಾರೆ. ಇವರ ಅಜಾಗ್ರತೆಯೂ ದುರ್ಬುದ್ಧಿಯೂ ಬಹಳವಾಗಿ ಪಚ್ಚಿರುವುದರಿಂದ ಇವರು ಪ್ರಕಟಿಸುವ ತಪ್ಪು ವರ್ತಮಾನಗಳಿಗೆ ಒದಲಾಗಿ ಸರ್ಕಾರದವರು ನಿಜವಾದ ವರ್ತಮಾನ ಕೊಡುತ್ತೇವೆಂದರೂ ಕೂಡ ಇವರು ಬೇಡವೆನ್ನುತ್ತಾರೆ. ಇದರ ನಿಜಾಂಶವನ್ನು ನನ್ನ ಸ್ವಂತ ಅನುಭವದಿಂದಲೇ ಬಲ್ಲೆನಲ್ಲದೆ ಇಂಥಾ ಒಂದು ಪತ್ರಿಕೆಯ ಸಂಪಾದಕರಿಗೆ ನಿಜವಾದ ವರ್ತಮಾನವನ್ನು ಕೊಡಬೇಕೆಂದು ವಿವ್ಯಾರವರು ತಮ್ಮನ್ನು ಮೊಕ್ತಾ ನೋಡಲು ಅಪೇಕ್ಷಿಸಿದಾಗ್ಯೂ ಸ್ವಲ್ಪವೂ ಮರ್ಯಾದೆಇಲ್ಲದೆ ಬರುವುದಿಲ್ಲವೆಂದು ಜೀಳಿದರು.

ಈ ರೀತಿ ನ್ಯಾಯ ಮೀರಿದ ನಡತೆಯನ್ನು ಜವಾಬ್ದಾರಿಯುಳ್ಳ ಯಾವ ಸರ್ಕಾರದವರೂ ಪ್ರೋತ್ಸಾಹಿಸಲಾರರು. ಈ ಪತ್ರಿಕಾಕರ್ತರು ತಮಗೆ ಯಾವ ವಿಧವಾದ ನಿರ್ಬಂಧವನ್ನೂ ಇಡಕೂಡದೆಂದು ಅಪೇಕ್ಷಿಸುವಂತೆ ಕಾಣುತ್ತದೆ. ಈ ಪತ್ರಿಕೆಗಳಿಂದ ಎಷ್ಟುಮಟ್ಟಿನ ಭಯವು ವುಂಟಾಗಿದೆ ಯೆಂದರೆ ಕಸಬಿಗಳಲ್ಲಿಯೂ ಡಿಸ್ಟ್ರಿಕ್ಟುಗಳಲ್ಲಿಯೂ ಇರುವ ಸರ್ಕಾರಿ ನೌಕರರು ತಮ್ಮನ್ನು ಪತ್ರಿಕಾಕರ್ತರು ಬೈಯದೆ ಇರುವದಕ್ಕಾಗಲಿ ಅಥವಾ ಪತ್ರಿಕಾಕರ್ತರ ಪ್ರೀತಿಯನ್ನು ಸಂಪಾದಿಸುವದಕ್ಕಾಗಲಿ ಏನುಬೇಕಾದರೂ ಮಾಡಲು ಸಿದ್ಧರಾಗಿರುತ್ತಾರೆ. ಬೇರೆ ಬೇರೆ ವೃತ್ತಿ ವ್ಯಾಪಾರಗಳನ್ನನುಸರಿಸುತ್ತಿರುವೆಂಥವರು ತಾವು ಈರೀತಿ ನಡಿಯಬೇಕೆನ್ನುವುದಕ್ಕೆ ಒಂದೊಂದು ಪದ್ಧತಿಯೂ ಕಟ್ಟಳೆಯೂ ಉಂಟು. ಆದರೆ ಪತ್ರಿಕಾ ಪ್ರಕಟನೆಯು ಈಗಲೂ ಇಂಡಿಯಾ ದೇಶೀಯರ ಬುದ್ಧಿಗೆ ಅನ್ಯವಾಗಿದೆಯೇ ಹೊರತು ಜೀರ್ಣವಲ್ಲ. ಈ ಕೆಲಸವು ಅವಿದ್ಯೆಯುಳ್ಳವರ ಕೈಯಲ್ಲೂ ಒಳ್ಳೆಯ ಶಿಕ್ಷಣವನ್ನು ಹೊಂದದವರ ಕೈಯಲ್ಲೂ ಸಿಕ್ಕಿದರೆ ಇದರಿಂದ, ನಮ್ಮ ಕಣ್ಣುಮುಂದೆ ನಿತ್ಯವೂ ನಡೆಯುತ್ತಿರುವಂತೆ, ಪ್ರಜೆಗಳಿಗೆ ಬಹಳ ತೊಂದರೆಯುಂಟಾಗುತ್ತದೆ. ತಮ್ಮಗಳ ಪರಾಮರಿಕೆ ಬಗ್ಗೆ ಇಟ್ಟಿರುವ ವರ್ತಮಾನ ಪತ್ರಿಕೆಗಳ ಭಾಗಗಳನ್ನು ತಾವುಗಳಲ್ಲರೂ ಪರಾಮರಿಸಿರುವಿರೆಂದು ನಂಬುತ್ತೇನೆ. ಅವುಗಳಿಂದ ಯಾವ ರೀತಿಯಲ್ಲಿ ಎಷ್ಟುಮಟ್ಟಿನ ಕೆಡಕು ಉಂಟಾಗುತ್ತಿದೆಯೆಂದು ತಮ್ಮೆಲ್ಲರಿಗೆ ಸುಮಾರಾಗಿ ಸ್ಪಷ್ಟವಾಗಿದ್ದೀತು. ಈಗ ನಾವು ಯೋಚಿಸುತ್ತಿರುವಂಥಾ ಪತ್ರಿಕಾಕರ್ತರು ಒಂದು ತರದ ಸುಳ್ಳು ಅಭಿಪ್ರಾಯವನ್ನು ಸೃಷ್ಟಿಸುತ್ತಿದ್ದಾರೆ. ಈ ಅಭಿಪ್ರಾಯವು ನಿಜವಾದ ಅಭಿಪ್ರಾಯಗಳನ್ನೆಲ್ಲಾ ಹೊರಗೆ ಅಟ್ಟಿ ಅವುಗಳ ಸ್ಥಾನದಲ್ಲಿ ನೆಲೆಗೊಳ್ಳುತ್ತಿದೆ. ತತ್ಪ್ರಾಪಿ ಡಿಸ್ಟ್ರಿಕ್ಟುಗಳಲ್ಲಿ ಈ ರೀತಿ ಬಹಳವಾಗಿ ನಡೆಯುತ್ತಿದೆ. ಮಿ॥ ಸೈಯದ್ ಅಮೀರ್ ಹುಸೇನರವರೂ ಮಿ॥ ನಾಗಪ್ಪನವರೂ ಏನೇರಿನ ಹಾಗೆ ಗ್ರಾಮಾಂತರಗಳಲ್ಲಿರುವ ಪ್ರಜೆಗಳಿಗೆ ತಮ್ಮ ಅನುಭವಕ್ಕೂ ವರ್ತಮಾನ ಪತ್ರಿಕೆಗಳಲ್ಲಿ ಬರೆದಿರುವುದಕ್ಕೂ ವ್ಯತ್ಯಾಸ ವುಂಟೆಂಬುವುದು ಚೆನ್ನಾಗಿ ತಿಳಿದಿದೆ. ಅವರೆ ಸುಳ್ಳು ವರ್ತಮಾನಗಳನ್ನು ದಿನದಿನದಲ್ಲೂ ವಾರವಾರದಲ್ಲೂ ಸರ್ವದಾ ಹೇಳುವುದರಿಂದಲೂ, ವಿದ್ಯಮಾನಗಳಿಗೆ ಅಪಾರ್ಥಗಳನ್ನು ಸರ್ವದಾ ಕಲ್ಪಿಸುತ್ತಿರುವುದರಿಂದಲೂ, ಸರ್ಕಾರದವರಿಗೆ ಅಯೋಗ್ಯವಾದ ಉದ್ದೇಶಗಳುಂಟೆಂದು ಸರ್ವದಾ ಹೇಳುವುದರಿಂದಲೂ ಗ್ರಾಮಾಂತರವಾಸಿಗಳ ಮನಸ್ಸಿನಲ್ಲಿ ಒಂದು ವಿಧವಾದ ಸುಳ್ಳು ಅಭಿಪ್ರಾಯ ಹುಟ್ಟಿಯೇ ಹುಟ್ಟುತ್ತದೆಂಬುವುದರಲ್ಲಿ ಸಂಶಯವಿಲ್ಲ. ದೂರದಲ್ಲಿರುವ ಡಿಸ್ಟ್ರಿಕ್ಟುಗಳಿಂದ ಪ್ರಜಾ ಪ್ರತಿನಿಧಿ ಸಭೆಗೆ ಬರುವ ಪ್ರತಿನಿಧಿಗಳು ಸರ್ಕಾರದ ಮುಖ್ಯಾಧಿಕಾರಿಗಳವರಿಗೆ ಮೊಕ್ತಾ ಬಂದು ಸರ್ಕಾರದವರು ಮಾಡಿದ ಕಾರ್ಯಗಳನ್ನೂ ಅವರ ಉದ್ದೇಶಗಳನ್ನೂ ಕುರಿತು ನಿಜವಾದ ವರ್ತಮಾನವನ್ನು ಕೇಳಿದಾಗ ವರ್ತಮಾನ ಪತ್ರಿಕೆಗಳು ತಮಗೆ ಎಷ್ಟುಮಟ್ಟಿನ ಸುಳ್ಳು ಸುದ್ದಿಯನ್ನು ಕೊಟ್ಟಿದ್ದುವೆಂಬುವುದನ್ನು ನೋಡಿ ಪರಮಾಶ್ಚರ್ಯಭರಿತರಾದುದನ್ನು ನಾನೇ ನೋಡಿರುತ್ತೇನೆ. ಆದರೆ ಈ ಜ್ಞಾನವು ಸ್ವಲ್ಪ ಕಾಲಮಾತ್ರ ಇರುತ್ತದೆ. ಅವರು ಪುನಃ ಡಿಸ್ಟ್ರಿಕ್ಟುಗಳಿಗೆ ಹೊರಟುಹೋದಮೇಲೆ ವರ್ತಮಾನ ಪತ್ರಿಕೆಗಳನ್ನೇ ನಂಬಲಾರಂಭಿಸುತ್ತಾರೆ. ಈ ತರದ ವರ್ತಮಾನ ಪತ್ರಿಕೆಗಳಿಗೆ ಆಶ್ರಯಾಗಬೇಕೆಂದೇ ಈ ರೆಗ್ಯುಲೇಷನನ್ನು ಉದ್ದೇಶಿಸಿ ಇದೆ.

ಮೂಪಣೆ ಮಾಡಿದುದಕ್ಕಾಗಲಿ ರಾಜದ್ರೋಹಕರವಾದ ಲೇಖನಗಳನ್ನು ಪ್ರಕಟಿಸಿದುದಕ್ಕಾಗಲಿ ಈ ಪತ್ರಿಕೆಗಳ ಮೇಲೆ ಯಾಕ ಕ್ರಿಮಿನಲ್ ತರಫು ವ್ಯವಹರಣೆ ನಡಿಸಕೂಡದೆಂದು ನೀವು ಕೇಳಬಹುದು. ಹೀಗೆ ಮಾಡಿದರೆ ಈ ಪತ್ರಿಕೆಗಳಿಗೆ ಒಂದು ಬಗೆಯ ಪ್ರಸಿದ್ಧಿಯುಂಟಾಗುವುದು. ಈ ಅಪರಾಧವು ಪ್ರಸಃ ಉಂಟಾಗುವುದಿಲ್ಲವೆಂಬ ಭರವಸೆಯೂ ಇರುವದಿಲ್ಲ. ಆದ್ದರಿಂದ ಹಾಗೆ ಮಾಡುವದು ಅಪೇಕ್ಷಣೀಯವಲ್ಲ. ಈ ಬಿಲ್ಲಿನಿಂದ ಎರಡು ದೋಷಗಳನ್ನು ನಿವಾರಿಸಬೇಕೆಂದು ಉದ್ದೇಶಿಸಿ ಇದೆ—ಮೊದಲನೆಯ ದೋಷವೇನೆಂದರೆ, ಪ್ರಜೆಗಳಿಗೆ ಶ್ರೀಮೆ ಮಹಾರಾಜ ರಾಜಾಸಾಹೇಬ್ ಬಹದ್ದರವರಲ್ಲಿರುವ ರಾಜಭಕ್ತಿಯೂ ಗೌರವವೂ ತಪ್ಪುವ ರೀತಿಯಲ್ಲಿ ಬರವಣಿಗೆಗಳನ್ನು ಬರೆದು ಶ್ರೀಮೆ ಮಹಾರಾಜಾ ರಾಜಾಸಾಹೇಬ್ ಬಹದ್ದರವರ ಸರ್ಕಾರವನ್ನು ದೂಷಿಸುವುದು

ಎರಡನೆಯ ದೋಷವೇನೆಂದರೆ, ಬ್ರಿಟಿಷ್ ಸರ್ಕಾರದವರ ವಿಷಯದಲ್ಲಿ ಮೈಸೂರಿನ ಪ್ರಜೆಗಳಿಗೆ ತಪ್ಪು ತಿಳಿವಳಿಕೆಯೂ ತಪ್ಪು ಅಭಿಪ್ರಾಯಗಳೂ ಉಂಟಾಗುವ ಹಾಗೆ ಸದರೀ ಬ್ರಿಟಿಷ್ ಸರ್ಕಾರವನ್ನು ದೂಷಿಸುವುದು. ಯಾವ ವಿಧವಾದ ಅಧಿಕಾರಕ್ಕೂ ಒಳಗಾಗಬಾರದೆಂಬ ಒಂದು ಅಭಿಪ್ರಾಯವು ಹೊಸದಾಗಿ ಜನರ ಮನಸ್ಸಿಗೆ ನಾಟಿರುವುದೇ ಈ ರೀತಿಯಾಗಿ ಎರಡು ವಿಧದಲ್ಲಿ ಕಾಣಿಸಿಕೊಳ್ಳುತ್ತದೆ. ಇಂಥಾ ಅಭಿಪ್ರಾಯವು ಹರಡಿಕೊಳ್ಳದಂತೆ ನೋಡಿಕೊಳ್ಳುವುದು ಬ್ರಿಟಿಷ್ ಸರ್ಕಾರದವರಿಗೆ ಹೇಗೆ ಮುಖ್ಯವೋ ದೇಶೀಯ ಸಂಸ್ಥಾನದವರಿಗೂ ಹಾಗೆಯೇ ಮುಖ್ಯವಾಗಿ ಇದೆ. ಬ್ರಿಟಿಷ್ ಸರ್ಕಾರದ ಮತ್ತು ದೇಶೀಯ ಸಂಸ್ಥಾನಗಳ ಉದ್ದೇಶವೂ ಪ್ರಯೋಜನವೂ ಒಂದೇ ಆಗಿವೆ. ವರ್ತಮಾನ ಪತ್ರಿಕೆಗಳು ಶ್ರೀಮ್ಮೆ ಮಹಾರಾಜ ರಾಜಾಸಾಹೇಬ್ ಬಹದ್ದರವರ ಸರ್ಕಾರಿ ಅಧಿಕಾರಿಗಳನ್ನು ಮಾತ್ರವೇ ದೂಷಿಸುತ್ತಿದ್ದವರೆಗೂ ಅವುಗಳ ನಡತೆಯ ವಿಷಯದಲ್ಲಿ ಉದಾಸೀನ ಭಾವದಿಂದ ಇದ್ದುದಾಯಿತು. ಆದರೆ ಸರ್ಕಾರದ ಮೇಲೆ ದೋಷಾರೋಷಣೆ ಮಾಡಿ ಶ್ರೀಮ್ಮೆ ಮಹಾರಾಜಾ ರಾಜಾಸಾಹೇಬ್ ಬಹದ್ದರವರ ಅಧಿಕಾರವನ್ನೇ ಮೂಲೋತ್ಪಾಟನ ಮಾಡುವ ಪ್ರಯತ್ನವು ಹರಡಿಕೊಳ್ಳುತ್ತಿರುವುದಾಗಿಯೂ ವರ್ತಮಾನ ಪತ್ರಿಕೆಗಳಲ್ಲಿ ಬ್ರಿಟಿಷ್ ಸರ್ಕಾರದವರನ್ನು ದೂಷಿಸುವ ಬರವಣಿಗೆಗಳು ಪ್ರಕಟವಾಗುತ್ತಿರುವುದಾಗಿಯೂ ತಿಳಿದುಬಂದಕೂಡಲೇ ಈ ಕೆಡುಕು ಮಿತಿಮೀರಿತೆಂದೂ ಇದನ್ನು ಅಲಕ್ಷ್ಯ ಮಾಡುವುದು ಸರಿಯಲ್ಲವೆಂದೂ ತೋರಿತು. ಇಂಡಿಯಾ ದೇಶದ ಪೈಕಿ ನೇರಾಗಿ ಬ್ರಿಟಿಷ್ ಸರ್ಕಾರದವರ ಆಳ್ವಿಕೆಯಲ್ಲಿರುವ ಭಾಗಗಳಲ್ಲಿ ನಡೆಯುತ್ತಿರುವುದನ್ನು ದೃಷ್ಟಿಯಲ್ಲಿಟ್ಟರೆ ಅಲ್ಲಿನ ತೊಂದರೆಗಳ ಜತೆಗೆ ಈ ಸಂಸ್ಥಾನದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳೂ, ಅವರ ಕಾರ್ಯಗಳ ವಿಷಯದಲ್ಲಿಯೂ ಉದ್ದೇಶಗಳ ವಿಷಯದಲ್ಲಿಯೂ ತಪ್ಪು ಅಭಿಪ್ರಾಯಗಳನ್ನು ಪ್ರಕಟಿಸುವಂತೆ ಬಿಡುವುದರಿಂದ ಆ ಸರ್ಕಾರದವರ ವಿಷಯದಲ್ಲಿ ನಾವು ನಮ್ಮ ಕರ್ತವ್ಯ ನೆರವೇರಿಸಿದಂತಾಗುವುದಿಲ್ಲ. ಈ ಪತ್ರಿಕೆಗಳಿಗೆ ಸರ್ಕಾರದ ಮೇಲೆ ನಿಜವಾಗಿಯೂ ದ್ವೇಷವಿಲ್ಲ, ಸ್ವದೇಶಿಯೂ ಜನಗಳನ್ನು ಉತ್ತಮಸ್ಥಿತಿಗೆ ತರುವುದೂ ಈ ಪತ್ರಿಕೆಗಳ ಉದ್ದೇಶವೆಂದೂ ಕೆಲವರು ಹೇಳಬಹುದು. ಆದರೆ ಬ್ರಿಟಿಷ್ ಸರ್ಕಾರದವರ ರಕ್ಷಣೆಯಿಂದಲೂ ಸ್ನೇಹದಿಂದಲೂ ಮೈಸೂರು [illegible] ದಲ್ಲಿ ಕಾರ್ಯತಃ ಸ್ವರಾಜ್ಯವೇ ನಡೆಯುತ್ತಿದೆಯೆಂಬ ವಿಷಯವನ್ನು ದೃಷ್ಟಿಯಲ್ಲಿಟ್ಟರೆ ಈ ಪತ್ರಿಕಾಕರ್ತರಿಗೆ ಮೈಸೂರು ಸರ್ಕಾರದವರಮೇಲಾಗಲೀ ಬ್ರಿಟಿಷ್ ಸರ್ಕಾರದವರಮೇಲಾಗಲೀ ದ್ವೇಷವುಂಟೆಂದು ನಂಬುವುದು ಕಷ್ಟವಾಗುತ್ತದೆ. ಮೈಸೂರುಸೀಮೆಯ ಹೊರಗಿರುವ ಪತ್ರಿಕೆಗಳನ್ನು ಅನುಕರಿಸಿ ಇಲ್ಲಿನವರು ಬ್ರಿಟಿಷ್ ಇಂಡಿಯಾ ಸೀಮೆಯಲ್ಲಿ ನಡೆಯುತ್ತಿರುವ ವಿಷಯಗಳನ್ನು ಕುರಿತು ಹೀಗೆ ಬರೆಯುತ್ತಿದ್ದಾರೆಂದು ನನಗೆ ತೋರುತ್ತದೆ. ಹೀಗಿಲ್ಲದೆ ಇದ್ದಪಕ್ಷದಲ್ಲಿ ನಾನು ಕೆಲವುದಿನಗಳಹಿಂದೆ ಕೇಳಿದಹಾಗೆ ಕೆಲವು ಪಾಠಶಾಲೆಗಳ ಹುಡುಗರು ಮೈಸೂರಿನಲ್ಲಿ ತಮ್ಮ ಉಪಾಧ್ಯಾಯರನ್ನು ಮುಂದಿಟ್ಟುಕೊಂಡು ಶಿವಾಜಿಮಹೋತ್ಸವವನ್ನು ನಡೆಸುವುದಕ್ಕೆ ಕಾರಣವೇನು? ಇದು ಇತರಕಡೆ ನಡೆಯುತ್ತಿರುವುದನ್ನು ಅರ್ಥ ತಿಳಿದುಕೊಳ್ಳದೆ ಅನುಕರಿಸುವುದರಿಂದ ಉಂಟಾಯಿತೇ ಹೊರತು ಹಾಗಿಲ್ಲದಿದ್ದರೆ ಪುರಾತನವಾಗಿಯೂ ಪ್ರೀತಿ ಗೌರವಗಳಿಗೆ ಪಾತ್ರವಾಗಿಯೂ ಇರುವ ರಾಜವಂಶಕ್ಕೆ ಸೇರಿದವರಾದ ಮಹಾರಾಜರವರು ಆಳುತ್ತಿರುವ ನಮ್ಮ ದೇಶೀಯ ಸಂಸ್ಥಾನದಲ್ಲಿ ಹೀಗೆ ನಡೆಸಿದುದರ ಅರ್ಥವೇನು, ಅಥವಾ ಅದರ ಔಚಿತ್ಯವೇನು? ಇದಲ್ಲದೆ ಮೈಸೂರಿನಲ್ಲಿ ಕೆಲವು ತಿಂಗಳಹಿಂದೆ ನಡೆದ ಮಿಟಿಂಗಿನಲ್ಲಿ ಒಂದಾನೊಂದು ಪಾಠಶಾಲೆಗೆ ಸೇರಿದ ಒಬ್ಬ ದೊಡ್ಡಮನುಷ್ಯರು—"ಪ್ರಜೆಗಳನ್ನು ಹಿಂಸಿಸುವ ರಾಜರುಗಳಿಂದಲೂ ಸರ್ಕಾರಿ ಅಧಿಕಾರಿಗಳಿಂದಲೂ ಬಲಾತ್ಕಾರವಾದ ಉಪಾಯಗಳಮೂಲಕ ಪ್ರಜೆಗಳು ನಿವೃತ್ತರಾಗುವುದು ನ್ಯಾಯವು" ಎಂದು ಹೇಳಿದುದಾಗಿಯೂ ನಾನು ಕೇಳಿದೆನು. ಇಷ್ಟುಮೆಟ್ಟಿನ ಸಾಹಾರ್ದವನ್ನು ಯಾವ ಸಂದರ್ಭದಲ್ಲಿ ಅಥವಾ ಯಾರವಿಷಯದಲ್ಲಿ ಪ್ರಕಾಶಪಡಿಸೋಣಾಯಿತೆಂಬುವುದು ನನಿಗೆ ಜ್ಞಾಪಕವಿಲ್ಲ; ಆದರೆ, ಮೈಸೂರು ಸಂಸ್ಥಾನದಲ್ಲಿ ಶ್ರೀಮ್ಮೆ ಮಹಾರಾಜರವರು ಬಹಳ ಈಚೆಗೆ ಲಕ್ಷಾಂತರ ರೂಪಾಯಿಗಳ ತೆರಿಗೆಯನ್ನು ಸೋಡಿ ಬಿಟ್ಟು, ಪ್ರಜೆಗಳಿಗೆಲ್ಲಾ ಉಚಿತವಾಗಿ ವಿದ್ಯಾಭ್ಯಾಸ ಮಾಡಿಸುವುದಕ್ಕೆ ಅಪ್ಪಣೆ ಕೊಟ್ಟು, ಸಂಸ್ಥಾನಕ್ಕೊಸ್ಕರ ಬಹಳ ಹಣ ವ್ಯಯವಾಗುವ ಆರೋಗ್ಯದ ಇಲಾಖೆಯನ್ನು ಏರ್ಪಡಿಸಿ, ನ್ಯಾಯವಿಮರ್ಶೆಯ ಅಧಿಕಾರವನ್ನೂ ಕಾರ್ಯನಿರ್ವಾಹಾಧಿಕಾರವನ್ನೂ ಪ್ರತ್ಯೇಕಿಸುವುದಕ್ಕೆ ಪ್ರಥಮ ಪ್ರಯತ್ನಗಳನ್ನು ಮಾಡಿರುವುದಲ್ಲದೆ ಇತರ ಕಡೆಗಳಲ್ಲಿ ಜಾರಿಗೆ ತರಬೇಕೆಂದು ಜನರು ಇಪ್ಪತ್ತೊಂದು ವರ್ಷಗಳ ಪರ್ಯಂತ ಗಲಭೆಮಾಡುತ್ತಿರುವ ಇನ್ನೂ ಎಷ್ಟೋ ಇತರ ಉತ್ತಮವಾದ ಏರ್ಪಾಡುಗಳನ್ನು ಮಾಡಿರುವುದರಿಂದ ಇಲ್ಲಿ ಹೀಗೆ ಹೇಳುವುದು ಎಷ್ಟು ಅನುಚಿತವೆಂಬುವುದು ನಿಮಗೇ ತಿಳಿಯುತ್ತದೆ.

ಇಂಥಾ ಕಾರ್ಯಗಳು ದ್ವೇಷದಿಂದ ಹುಟ್ಟಿದುವೆಂದೇ ಇಟ್ಟುಕೊಂಡರೂ, ಇಲ್ಲವೇ ಇತರ ಕಡೆಗಳಲ್ಲಿ ನಡೆದುದನ್ನು ಅರ್ಥ ತಿಳಿಯದೆ ಅನುಕರಿಸೋಣದರಿಂದ ಉಂಟಾಯಿತೆಂದೇ ಇಟ್ಟುಕೊಂಡರೂ, ಅವುಗಳಿಂದ ಚಿಕ್ಕವರ ಮನಸ್ಸಿನಲ್ಲಿಯೂ ಮೊಢರ ಮನಸ್ಸಿನಲ್ಲಿಯೂ ಒಂದೇ ರೀತಿಯಾಗಿ ಸುಳ್ಳು ಅಭಿಪ್ರಾಯಗಳು ಹುಟ್ಟುತ್ತವೆ. ಹೀಗೆ ರಾಜಭಕ್ತಿಯು ತಪ್ಪುವುದಕ್ಕೆ ಅವಕಾಶ ಕೊಡದಿರುವುದು ಸರ್ಕಾರದವರು ಅವಶ್ಯವಾಗಿ ಮಾಡಬೇಕಾದ ಕರ್ತವ್ಯವಾಗಿದೆ. ಈ ಉದ್ದೇಶವು ನೆರವೇರಬೇಕಾದರೆ ನ್ಯಾಯವಾಗಿಯೂ ಪ್ರಾಮಾಣಿಕತೆಯಿಂದಲೂ ಗುಣದೋಷ ನಿರೂಪಣೆ ಮಾಡಬೇಕೆಂಬ ನಿಯಮವನ್ನು ಅತಿಕ್ರಮಿಸಿ ನಡೆಯುವುದರಿಂದ ಉಂಟಾಗುವ ಫಲಿತಾಂಶಗಳನ್ನು

ವರ್ತಮಾನಪತ್ರಿಕಾಕರ್ತರಿಗೆ ಮುಂಚಿತವಾಗಿಯೇ ತಿಳಿಸಬೇಕು. ಇಂಥಾ ಒಂದು ಕಾನೂನು ಇದ್ದಮಾತ್ರಕ್ಕೇ ಅದರ ಪ್ರಕರಣಗಳಲ್ಲಿ ವಿಧಿಸಿರುವ ದಂಡನೆಯನ್ನು ಅವಶ್ಯಕವಾಗಿ ಜಾರಿಮಾಡಬೇಕೆಂಬ ನಿರ್ಬಂಧವೇನೂ ಇರುವುದಿಲ್ಲ. ಈ ತರದ ಕಾನೂನು ಜಾರಿಯಲ್ಲಿ ಇರುತ್ತಿದ್ದರೆ ಅದರಿಂದ ಈ ರೀತಿ ನಡೆಯಬೇಕೆಂಬುವುದನ್ನು ತಿಳಿದುಕೊಳ್ಳಲು ಅವಕಾಶವಾಗುತ್ತದೆ. ಮೆ॥ ನಾಗಪ್ಪನವರು ಸೂಚಿಸಿದ ಹಾಗೆ ಇಂಥಾ ಒಂದು ಕಾನೂನು ಇರುವುದರಿಂದ ಪತ್ರಿಕಾಕರ್ತರಿಗೆ ತಮ್ಮ ಕಸಬು ಶ್ರೇಷ್ಠವಾದುದೆಂಬುವುದು ಜ್ಞಾಪಕದಲ್ಲಿರುವುದಲ್ಲದೆ ಸುವ್ಯವಸ್ಥಿತವಾದ ಸರ್ಕಾರದ ವಿಷಯದಲ್ಲೂ ಪ್ರಜಾಸಾಮಾನ್ಯದ ವಿಷಯದಲ್ಲೂ ತಮ್ಮ ಜವಾಬ್ದಾರಿಯೇನು ಎಂಬುವುದೂ ನೆನಪಿನಲ್ಲಿರುತ್ತದೆ. ಈ ಕಾನೂನಿನಿಂದ ಜನರಮನಸ್ಸಿನಲ್ಲಿ ಸುಳ್ಳುಅಭಿಪ್ರಾಯಗಳನ್ನು ಸೃಷ್ಟಿಸುವುದರಲ್ಲಿ ಉದ್ಯುಕ್ತರಾದ ಪತ್ರಿಕಾಕರ್ತರಿಗೆ ಅಡ್ಡಿಯುಂಟಾಗುವುದೇ ಹೊರತು ನಿಜವಾಗಿ ಜನರಿಗಿರುವ ಅಭಿಪ್ರಾಯಕ್ಕೆ ಈ ಕಾನೂನಿನಿಂದ ಎಷ್ಟುಮಾತ್ರವೂ ಬಾಧೆಯಿಲ್ಲ. ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದರವರ ಸರ್ಕಾರದವರು ಯಾವ ಕಾರ್ಯವನ್ನು ಮಾಡಬೇಕಾದರೂ ಜನರ ಅಭಿಪ್ರಾಯಗಳನ್ನು ಚೆನ್ನಾಗಿ ತಿಳಿದುಕೊಂಡೇ ಯಾವಾಗಲೂ ಮಾಡಿರುತ್ತಾರೆ. ಪ್ರಜೆಗಳಿಗೆ ನಿಜವಾಗಿಯೂ ಇರುತ್ತಿರುವ ಅಭಿಪ್ರಾಯವನ್ನು ತಿಳಿಯಪಡಿಸಲು ಸದರೀ ಸರ್ಕಾರದವರು ಏಕಪ್ರಕಾರವಾಗಿ ಪ್ರೊತ್ಸಾಹಕೊಡುತ್ತಾ ಬಂದಿರುತ್ತಾರೆ. ಪೂರ್ವದಲ್ಲಿ ಅವರು ಈ ಮಾರ್ಗವನ್ನೇ ಅನುಸರಿಸುತ್ತಾ ಬಂದಿರುವರು ; ಮುಂದೆಯೂ ಇದೇ ಮಾರ್ಗವನ್ನೇ ಅನುಸರಿಸುವರೆಂದು ದೃಢವಾಗಿ ಹೇಳಬಲ್ಲೆನು.

ಸದರೀ ವಿಜ್ಞಾಪನೆಯನ್ನು ಕುರಿತು ಸಭೆಯವರ ಅಭಿಪ್ರಾಯವನ್ನು ಕೇಳಲಾಗಿ ಎಲ್ಲರೂ ಏಕವಾಕ್ಯತೆಯಿಂದ ಅನುಮೋದಿಸಿದರು.

ಅನಂತರ ಸಭೆಯು ಭರಕಾಸ್ತಾಗಿತು.

ವಿ. ಪಿ. ಮಾಧವರಾವ್,
ಸಭಾಧ್ಯಕ್ಷರು.

Govt. Press, Bangalore—1908